# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:07-03-2025 ರಂದು ಶುಕ್ರವಾರ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್, ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್ ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಪ್ರೊ. ಎಸ್.ವಿ. ಕೃಷ್ಣಮೂರ್ತಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 5. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 6. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 7. | ಡಾ. ಕೆ.ಎಲ್. ಅರವಿಂದ. ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಮಧು ಜಿ. ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ ಉಲ್ಲಾಸ್ ಇ.ಜಿ. ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಶೈಲಜಾ ಸಿದ್ದಪ್ಪ ಹೊಸಲೇರ ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ದಿನಕುಮಾರ್ ಎಂ. | ಸದಸ್ಯರು |
| 12. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 13. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 14. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 15. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 16. | ಶ್ರೀ ಎಸ್.ಜಿ. ಅರವಿಂದ | ಸದಸ್ಯರು |
| 17. | ಪ್ರೊ. ಜೆ. ನಾರಾಯಣ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಡಾ. ಕೇಶವ ಹೆಚ್. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರೂ ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ-28(ಎಫ್)ರನ್ವಯ ಸಿಂಡಿಕೇಟ್‌ಗೆ ನಾಮನಿರ್ದೇಶಿತ ಪ್ರಾಂಶುಪಾಲರುಗಳಾದ ಶ್ರೀ ಉಲ್ಲಾಸ್ ಇ.ಜಿ., ಸಹ್ಯಾದ್ರಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್, ಚಿಕ್ಕಮಗಳೂರು ಮತ್ತು ಡಾ.ಶೈಲಜಾ ಸಿದ್ದಪ್ಪ ಹೊಸಲೇರ, ಸರ್.ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿ ಇವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಅವಧಿ ಮುಗಿದ ಪ್ರಾಂಶುಪಾಲರುಗಳಾದ ಡಾ.ಅರುಣಾ ಎ., ಪಿ.ಇ.ಎಸ್. ಕಾಲೇಜು, ಶಿವಮೊಗ್ಗ ಮತ್ತು ಡಾ.ಪರಮೇಶ ಮಸಲವಾಡ, ಶ್ರೀ ವೀರಭದ್ರೇಶ್ವರ ಶಿಕ್ಷಣ ಮಹಾವಿದ್ಯಾಲಯ, ತಾಳಗುಂದ ಇವರುಗಳ ಸೇವೆಯನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಲಾಯಿತು.

8/4/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಶ್ರೀ ಬಿ.ಎಸ್. ಶಶಿಧರ್‌ರವರು ಮಾತನಾಡಿ, ಅವಧಿ ಮುಗಿದ ಸಿಂಡಿಕೇಟ್ ಸದಸ್ಯರನ್ನು ಕೂಡ ಸಭೆಗೆ ಕರೆಸಿ ಸನ್ಮಾನಿಸಿ ಬೀಳ್ಕೊಡಬೇಕು ಎಂದರು. ಶ್ರೀ ಶಿವಕುಮಾರ್‌ರವರು ಕೂಡ ಇದಕ್ಕೆ ಧ್ವನಿಗೂಡಿಸಿದರು. ಮಾನ್ಯ ಕುಲಪತಿಗಳು ಮಾತನಾಡಿ, ಇದು ಉತ್ತಮ ಸಲಹೆಯಾಗಿದ್ದು, ಮುಂದಿನ ದಿನಗಳಲ್ಲಿ ಈ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿದರು. ಶ್ರೀಮತಿ ಸಾಕಮ್ಮರವರು ಮಾತನಾಡಿ ಈ ಹಿಂದೆ ದಿನಾಂಕ:19–11–2024 ರಂದು ಸಿಂಡಿಕೇಟ್ ಸಭೆ ನಡೆದಿದ್ದು, ಈಗ 13 ವಾರಗಳ ನಂತರ ನಡೆಯುತ್ತಿದೆ. ವಿಶ್ವವಿದ್ಯಾಲಯ ಕಾಯ್ದೆ ಪ್ರಕಾರ 8 ವಾರಗಳಿಗೊಮ್ಮೆ ನಡೆಯಬೇಕು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿ ಮಾತನಾಡಿ ಸಕಾಲದಲ್ಲಿ ಸಭೆಗಳು ನಡೆದರೆ ವಿಷಯಗಳ ಸಂಖ್ಯೆ ಕಡಿಮೆಯಿರುತ್ತದೆ. ಉತ್ತಮ ಚರ್ಚೆ ನಡೆಸಿ ನಿರ್ಣಯ ತೆಗೆದುಕೊಳ್ಳಬಹುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಇನ್ನು ಮುಂದೆ ಸಕಾಲದಲ್ಲಿ ಸಿಂಡಿಕೇಟ್ ಸಭೆಗಳನ್ನು ನಡೆಸಲಾಗುವುದು ಎಂದರು.

ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2025–ಸಿಂ–2.01:** ದಿನಾಂಕ:19–11–2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ಕುಲಸಚಿವರು ದಿನಾಂಕ:19–11–2024ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯ ಅನುಮೋದನೆ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿ, ಅನುಮೋದನೆ ಕೋರಿದರು.

ಶ್ರೀ ಕೆ.ಪಿ.ಶ್ರೀಪಾಲ್‌ರವರು ವಿಷಯ ಸಂಖ್ಯೆ:2024–ಸಿಂ–5.01: ಎಲ್.ಎಂ.ಎಸ್. ಸಾಫ್ಟ್‌ವೇರ್ ಬಗ್ಗೆ ಮಾತನಾಡಿ, ಇದರ ಬಗ್ಗೆ ಸದನದಲ್ಲಿ ಕೂಡ ಚರ್ಚೆಯಾಗುತ್ತಿದೆ ಎಂದರು. ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ, ಹಿಂದಿನ ಸಭೆಯಲ್ಲಿ ಎಲ್.ಎಂ.ಎಸ್. ಸಾಫ್ಟ್‌ವೇರ್ ಅನುಷ್ಠಾನ ಸೇರಿದಂತೆ ಈವರೆಗೆ ಏನೇನು ಕೆಲಸ ಮಾಡಬೇಕಾಗಿತ್ತು. ಅವರು ಈವರೆಗೆ ಪ್ರವೇಶ ನೀಡಿರುವುದು, ಅಧ್ಯಯನ ಸಾಮಗ್ರಿಗಳ ಸರಬರಾಜು, ಸಂಪರ್ಕ ತರಗತಿಗಳನ್ನು ನಡೆಸಿರುವುದು ಸೇರಿದಂತೆ ಈಗಾಗಲೇ ಪಾವತಿಸಿರುವ ಹಣಕ್ಕೆ ಎಷ್ಟು ಕೆಲಸ ಮಾಡಿದ್ದಾರೆ. ಮುಂದೆ ಆಗಬೇಕಾಗಿರುವ ಕಾರ್ಯಗಳೇನು? ಎಂಬುದನ್ನು ಸಮಗ್ರವಾಗಿ ಪರಿಶೀಲಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲು ನಿರ್ಣಯವಾಗಿತ್ತು ಎಂದರು. ಕುಲಸಚಿವರು ಮಾತನಾಡಿ, ಸಭೆಯ ನಿರ್ಣಯದ ಮೇರೆಗೆ ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದಸ್ಯರಾಗಿ ನೇಮಕ ಮಾಡಿದ್ದ, ಡಾ.ಬಿ.ಎನ್.ಜಗದಾಳೆರವರು ಸಮಿತಿಯಲ್ಲಿ ಸದಸ್ಯರಾಗಿ ಕೆಲಸ ಮಾಡಲು ನಿರಾಕರಿಸಿದ್ದಾರೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ವರದಿ ನೀಡಲು ಸಿಂಡಿಕೇಟ್ ಸಧಸ್ಯರಾದ ಶ್ರೀ ಕೆ.ಪಿ. ಶ್ರೀಪಾಲ್, ಶ್ರೀ ಬಿ.ಎನ್. ಶಶಿಧರ, ಇಬ್ಬರು ತಾಂತ್ರಿಕ ತಜ್ಞರು, ಇಬ್ಬರು ಅಧ್ಯಾಪಕರು ಸೇರಿದಂತೆ ಒಂದು ಸಮಿತಿಯನ್ನು ರಚಿಸಲಾಗುವುದು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಒಪ್ಪಿಗೆ ಸೂಚಿಸಿದರು.

ಶ್ರೀಮತಿ ಸಾಕಮ್ಮ ರವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ದಿನಾಂಕ:19–07–2024ರ ಸಭೆಯ ವಿಷಯ ಸಂಖ್ಯೆ:2024–ಸಿಂ–3.38(ಸಿ) ಕುರಿತಾಗಿನ ನಿರ್ಣಯದಲ್ಲಿ ಶ್ರೀ ಎಂ. ಚಂದ್ರಕಾಂತರವರ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇನ್ನೊಮ್ಮೆ ಸಮಗ್ರವಾಗಿ ಪರಿಶೀಲಿಸಿ ಮುಂದಿನ ಆದೇಶ ಆಗುವವರೆಗೂ ಬಡ್ತಿಗೆ ಸಂಬಂಧಪಟ್ಟ ಎಲ್ಲಾ ಸೌಲಭ್ಯಗಳನ್ನು ತಡೆಹಿಡಿಯಲು ನಿರ್ಣಯಿಸಲಾಗಿತ್ತು. ಈ ಬಗ್ಗೆ ಏನು ಕ್ರಮ ಆಗಿದೆ ಎಂದರು. ಶ್ರೀ ಬಿ.ಎನ್.ಶಶಿಧರರವರು ಮಾತನಾಡಿ, ಶ್ರೀ ಚಂದ್ರಕಾಂತ ರವರಿಗೆ ಜೇಷ್ಠತಾ ಪಟ್ಟಿಯನ್ನು ಪರಿಗಣಿಸದೇ ಅರ್ಹತಾ ದಿನಾಂಕ ನಿಗದಿಪಡಿಸಿರುವುದು ಸೇರಿದಂತೆ ಅವರ ಕುರಿತಾಗಿ ಹಲವು ದೂರುಗಳಿವೆ ಎಂದರು.

ಕುಲಸಚಿವರು ಮಾತನಾಡಿ, ಶ್ರೀ ಎಂ. ಚಂದ್ರಕಾಂತ ರವರಿಗೆ ನೀಡಿದ್ದ ಆದೇಶದಲ್ಲಿನ ಸಹಾಯಕ ಕುಲಸಚಿವ ಹುದ್ದೆಯ ಅರ್ಹತಾ ದಿನಾಂಕದ ಬಗ್ಗೆ ಮೂರು ಸಹಾಯಕ ಕುಲಸಚಿವರುಗಳು ಆಕ್ಷೇಪಣೆ ಸಲ್ಲಿಸಿದ್ದಾರೆ. ಈ ಬಗ್ಗೆ ಪರಿಶೀಲಿಸಲಾಗುವುದು.

8/4/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಶ್ರೀ ಬಿ.ಎನ್. ಶಶಿಧರರವರು ವಿಷಯ ಸಂಖ್ಯೆ: 2024–ಸಿಂ–5.09(ಎ) ಕುರಿತಾಗಿ ಮಾತನಾಡಿ ಪರೀಕ್ಷಾ ವಿಭಾಗದಲ್ಲಿ ಲಾಜಿಸಿಸ್ ಸಂಸ್ಥೆಯವರ ಸೇವೆ ಬಳಸಿಕೊಳ್ಳುತ್ತಿರುವ ಬಗ್ಗೆ ಕೇಳಿದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಪ್ರಸ್ತುತ ನಾನ್ ಎನ್.ಇ.ಪಿ., ಮತ್ತು ದೂರಶಿಕ್ಷಣದ ರಿಪೀಟರ್ಸ್ ಪರೀಕ್ಷೆಗಳಿಗೆ ಮಾತ್ರ ಅವರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದ್ದು, ಮುಂದಿನ ಪರೀಕ್ಷೆಯ ನಂತರ ಲಾಜಿಸಿಸ್ ಸೇವೆಯನ್ನು ಬಿಡುಗಡೆಗೊಳಿಸಲಾಗುವುದು ಎಂದರು.

ಡಾ.ಮಧು ಜಿ., ರವರು ವಿಷಯ ಸಂಖ್ಯೆ:2024–ಸಿಂ–5.26(5–ಸಿ)ಬಗ್ಗೆ ಮಾತನಾಡಿ, ಅಧ್ಯಾಪಕೇತರ ನೌಕರರಿಗೆ ಈವರೆಗೆ ಬಡ್ತಿ ನೀಡಿಲ್ಲ. ಹಲವಾರು ನೌಕರರು ನಿವೃತ್ತಿಯ ಅಂಚಿನಲ್ಲಿದ್ದು, ಸಕಾಲಕ್ಕೆ ಬಡ್ತಿ ನೀಡಿದಲ್ಲಿ ಅವರಿಗೆ ಅನುಕೂಲವಾಗುತ್ತದೆ ಎಂದರು. ಕುಲಸಚಿವರು ಮಾತನಾಡಿ, 10 ಉಪಕುಲಸಚಿವ ಹುದ್ದೆಗಳಿದ್ದು, ಇದರಲ್ಲಿ ಶೇ.75ರಷ್ಟು ಸಹಾಯಕ ಕುಲಸಚಿವರಿಂದ ಬಡ್ತಿ ಮತ್ತು ಶೇ.25ರಷ್ಟು ನಿಯೋಜನೆ ಮೇರೆಗೆ ಭರ್ತಿ ಮಾಡಲು ಅವಕಾಶವಿದೆ. ಬಡ್ತಿಗಾಗಿ ಸಹಾಯಕ ಕುಲಸಚಿವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000ದ ಪ್ರಕಾರ ನೇಮಕಾತಿ ಮಂಡಳಿಯ ಮೂಲಕ ಸಂದರ್ಶನ ನಡೆಸಿ ಅರ್ಹರಿಗೆ ಬಡ್ತಿ ನೀಡಲಾಗುವುದು. ಪ್ರಥಮ ದರ್ಜೆ ಸಹಾಯಕ ವೃಂದದಲ್ಲಿ ಶೇ.50ರಷ್ಟು ಬಡ್ತಿ ಮೂಲಕ ಮತ್ತು ಶೇ.50ರಷ್ಟು ನೇರ ನೇಮಕಾತಿ ಮೂಲಕ ತುಂಬಲು ಅವಕಾಶವಿದೆ. ಆದರೆ, ಅನುಕಂಪ ಆಧಾರಿತ ಹಾಗೂ ಹೈದ್ರಾಬಾದ್–ಕರ್ನಾಟಕ ನೇಮಕಾತಿ ಹೊರತುಪಡಿಸಿ, ಬಹಳ ವರ್ಷಗಳಿಂದ ನೇರ ನೇಮಕಾತಿ ಮಾಡಿಲ್ಲ. ಬಹಳಷ್ಟು ನೌಕರರು ಕಿರಿಯ ಸಹಾಯಕ ವೃಂದದಲ್ಲಿ ಸುಮಾರು 20 ವರ್ಷಗಳಿಗೂ ಹೆಚ್ಚಿನ ಸೇವೆ ಸಲ್ಲಿಸುತ್ತಿದ್ದಾರೆ. ಒಬ್ಬ ನೌಕರನಿಗೆ ಸೇವಾ ಅವಧಿಯಲ್ಲಿ ಕನಿಷ್ಠ 3 ಬಡ್ತಿಗಳಾದರೂ ದೊರೆಯಬೇಕು ಎಂದಿದೆ. ಆದರೆ, ಇಲ್ಲಿ ಒಂದೂ ಬಡ್ತಿ ಇಲ್ಲದೆ ಕೆಲವರು ನಿವೃತ್ತರಾಗಿದ್ದಾರೆ. ಇನ್ನೂ ಕೆಲವರು ನಿವೃತ್ತಿಯ ಅಂಚಿನಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಮತ್ತು ಸರ್ಕಾರವು ಅಧ್ಯಾಪಕೇತರ ನೌಕರರ ನೇಮಕಕ್ಕೆ ಅನುಮತಿ ನೀಡುತ್ತಿಲ್ಲವಾದ್ದರಿಂದ, ಪ್ರಥಮ ದರ್ಜೆ ಸಹಾಯಕ ವೃಂದದಲ್ಲಿ ನೇರ ನೇಮಕಾತಿಗೆ ಇರುವ ಶೇ.50 ಹುದ್ದೆಗಳನ್ನು ಫ್ರೀಜ್ ಮಾಡಿ ಬಡ್ತಿ ನೀಡಲು ಅನುಮತಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರದಿಂದ ಅನುಮತಿ ಬಂದ ಕೂಡಲೇ ಬಡ್ತಿ ನೀಡಲಾಗುವುದು. ಈ ಬಗ್ಗೆ ದಿನಾಂಕ:19–02–2025ರಂದು ನಡೆದಿರುವ ಡಿ.ಪಿ.ಸಿ. ಸಭೆಯಲ್ಲಿ ಕೂಡ ಅನುಮತಿ ಪಡೆಯಲಾಗಿದೆ. ಉಳಿದಂತೆ ದಿನಾಂಕ:19–02–2025ರಂದು ನಡೆದ ಡಿ.ಪಿ.ಸಿ. ಸಭೆಯಲ್ಲಿ ನಿರ್ಣಯಿಸಿರುವಂತೆ ಅರ್ಹ ನೌಕರರಿಗೆ ಶೀಘ್ರದಲ್ಲಿಯೇ ಬಡ್ತಿ ಆದೇಶ ನೀಡಲಾಗುವುದು ಎಂದರು.

**ನಿರ್ಣಯ:** ಉಳಿದಂತೆ ದಿನಾಂಕ:19–11–2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2025–ಸಿಂ–2.01(ಎ):** ದಿನಾಂಕ:19–11–2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:19–11–2024ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿ ದೃಢೀಕರಿಸಿತು.

**2025–ಸಿಂ–2.02:** ದಿನಾಂಕ:21–01–2025 ರಂದು ನಡೆದ ಸಿಂಡಿಕೇಟ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:21-01–2025 ರಂದು ನಡೆದ ಸಿಂಡಿಕೇಟ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2025–ಸಿಂ–2.2(ಎ):** ದಿನಾಂಕ:21–01–2025 ರಂದು ನಡೆದ ಸಿಂಡಿಕೇಟ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ ಕುರಿತು.

8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ನಿರ್ಣಯ: ಚರ್ಚೆಯ ನಂತರ ದಿನಾಂಕ:21-01-2025 ರಂದು ನಡೆದ ಸಿಂಡಿಕೇಟ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಅನುಮೋದಿಸಿ ಧೃಢೀಕರಿಸಲಾಯಿತು.

**2025-ಸಿಂ-2.03:** ಹಣಕಾಸು ಸಮಿತಿಗೆ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶಿಸುವ ಕುರಿತು.

ನಿರ್ಣಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ, 2000ರ ಪ್ರಕರಣ 32(1)(v) ಅನ್ವಯ ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ಒಬ್ಬ ಸದಸ್ಯರನ್ನು ಹಣಕಾಸು ಸಮಿತಿಗೆ ನಾಮನಿರ್ದೇಶನ ಮಾಡಲಾಗುತ್ತಿದ್ದು, ಅವರ ಸಿಂಡಿಕೇಟ್ ಸದಸ್ಯತ್ವದ ಅವಧಿ ಮುಗಿಯುವವರೆಗೂ ಅವರು ಹಣಕಾಸು ಸಮಿತಿಯ ಸದಸ್ಯರಾಗಿರುತ್ತಿದ್ದರು. ಆದರೆ, ದಿನಾಂಕ:19-11-2024ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 2024-ಸಿಂ-5.13ರಲ್ಲಿ ಹಣಕಾಸು ಸಮಿತಿಗೆ ನೇಮಿಸುವ ಸಿಂಡಿಕೇಟ್ ಸದಸ್ಯರನ್ನು ಪ್ರತಿ ವರ್ಷ ಬದಲಿಸಬೇಕೆಂದು ನಿರ್ಣಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀ ಶಿವಕುಮಾರ್ ಎಂ. ರವರನ್ನು ಒಂದು ವರ್ಷದ ಅವಧಿಗೆ ಸಿಂಡಿಕೇಟ್‌ನಿಂದ ಹಣಕಾಸು ಸಮಿತಿಗೆ ಸದಸ್ಯರಾಗಿ ನಾಮನಿರ್ದೇಶನ ಮಾಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

**2025-ಸಿಂ-2.04:** ಪರಿನಿಯಮಗಳ ಸ್ಥಾಯಿ ಸಮಿತಿಯಿಂದ ಸಿದ್ಧಪಡಿಸಲಾಗಿರುವ ಪರಿನಿಯಮಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ.

ಚರ್ಚೆ: ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಆಡಳಿತ ವಿಭಾಗದ ಕೆಲವು ಶಾಖೆಗಳಿಗೆ ಸಂಬಂಧಿಸಿದಂತೆ ಹಾಗೂ ವಿವಿಧ ಅಧ್ಯಯನ ಕೇಂದ್ರಗಳ ಪರಿನಿಯಮಗಳನ್ನು ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿತ್ತು. ಆದರೆ, ಸದರಿ ಪರಿನಿಯಮಗಳಲ್ಲಿ ಕಂಡುಬಂದ ಆಕ್ಷೇಪಣೆ ಹಾಗೂ ನ್ಯೂನತೆಗಳನ್ನು ಸರಿಪಡಿಸಿ ಪುನ: ಸಕ್ಷಮ ಪ್ರಾಧಿಕಾರಗಳ ಅನುಮೋದನೆಯ ನಂತರ ಮರು ಸಲ್ಲಿಸುವಂತೆ ತಿಳಿಸಿರುವುದರಿಂದ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.

ಶ್ರೀ ಬಿ.ಎನ್.ಶಶಿಧರರವರು ಮಾತನಾಡಿ, ಪರಿನಿಯಮಗಳು ಸರ್ಕಾರದ ಅನುಮೋದನೆ ಇಲ್ಲದೇ, ಇಷ್ಟು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ, ಅಂಕಪಟ್ಟಿ ಮತ್ತು ಪದವಿ ಪ್ರಮಾಣಪತ್ರಗಳನ್ನು ಹೇಗೆ ನೀಡಲಾಗುತ್ತಿದೆ? ಎಂದರು. ಶ್ರೀ ಶಿವಕುಮಾರ್ ಇವರು ಮಾತನಾಡಿ ಇಷ್ಟು ವರ್ಷ ಏಕೆ ಪರಿನಿಯಮಗಳನ್ನು ಸರ್ಕಾರದ ಅನುಮೋದನೆಗೆ ಕಳುಹಿಸಿಲ್ಲ? ಎಂದರು. ಶ್ರೀ ಶಾಂತಕುಮಾರ್, ಶ್ರೀ ಲಕ್ಷ್ಮೀಕಾಂತ ಚಿಮ್ಮನೂರ್ ಮತ್ತು ಶ್ರೀ ಮುಸಾವೀರ್ ಬಾಷಾರವರು ಇದಕ್ಕೆ ಧ್ವನಿಗೂಡಿಸಿದರು. ಪ್ರೊ.ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ಸ್ನಾತಕೋತ್ತರ ಕೋರ್ಸ್‌ಗಳಿಗೆ ರೆಗ್ಯುಲೇಷನ್‌ಗಳನ್ನು ಸಿದ್ಧಪಡಿಸಿ ಸರ್ಕಾರದ ಮೂಲಕ ಘನತೆವೆತ್ತ ಕುಲಾಧಿಪತಿಯವರ ಅಂಕಿತ ಪಡೆಯಲಾಗಿದೆ. ಸದರಿ ರೆಗ್ಯುಲೇಷನ್‌ನಲ್ಲಿ ಕೋರ್ಸ್ ಸ್ಟ್ರಕ್ಚರ್, ಆಂತರಿಕ ಅಂಕಗಳು, ಪರೀಕ್ಷಾ ಪದ್ಧತಿ, ಅಂಕಪಟ್ಟಿ, ಪದವಿ ಪ್ರಮಾಣಪತ್ರ ಮುಂತಾದವುಗಳಿಗೆ ನಿಯಮಗಳಿರುತ್ತವೆ. ಆದರೆ, ಪರಿನಿಯಮ ಅನುಮೋದನೆಯಾದಲ್ಲಿ ಆಯಾ ಕೋರ್ಸ್‌ಗಳಿಗೆ ಸಂಬಂಧಪಟ್ಟ ಬೋಧಕ ಮತ್ತು ಬೋಧಕೇತರ ಹುದ್ದೆಗಳು ಸರ್ಕಾರದಿಂದ ಮಂಜೂರಾಗುತ್ತದೆ. ಇದರಿಂದ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚು ಅನುಕೂಲವಾಗುತ್ತದೆ ಎಂದರು. ಕುಲಸಚಿವರು ಮಾತನಾಡಿ, ಪರಿನಿಯಮಗಳನ್ನು ಈ ಹಿಂದೆಯೇ ಸಿದ್ಧಪಡಿಸಿ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ, ಸರ್ಕಾರವು ಪರಿನಿಯಮಗಳಲ್ಲಿ ಕೆಲವು ತಿದ್ದುಪಡಿಗಳನ್ನು ಗುರುತಿಸಿ, ಅವುಗಳನ್ನು ಸರಿಪಡಿಸಿ ಮರು ಸಲ್ಲಿಸುವಂತೆ ಸೂಚಿಸಿ ಹಿಂದಿರುಗಿಸುತ್ತಿದೆ. ಅದನ್ನು ಮತ್ತೊಮ್ಮೆ ಪರಿನಿಯಮಗಳ ಸ್ಥಾಯಿ ಸಮಿತಿಯಲ್ಲಿ ಪರಿಶೀಲಿಸಿ, ಸರಿಪಡಿಸಿ ಸಲ್ಲಿಸಿದ ನಂತರ ಹಣಕಾಸು ಸಮಿತಿ, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆ ಪಡೆದುಕೊಂಡು ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ. ಪರಿನಿಯಮಗಳು ಅನುಮೋದನೆಯಾಗಿ ಬಂದಲ್ಲಿ ಅಗತ್ಯ ಹುದ್ದೆಗಳು ಸೃಜನೆಯಾಗುವುದರಿಂದ ಅತಿಥಿ ಉಪನ್ಯಾಸಕರ ಮೇಲಿನ ಅವಲಂಬನೆ ಕಡಿಮೆಯಾಗಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ವಿಶ್ವವಿದ್ಯಾಲಯಕ್ಕೆ ಆರ್ಥಿಕವಾಗಿ ಕೂಡ ಉಳಿತಾಯವಾಗುತ್ತದೆ ಮತ್ತು ಹೆಚ್ಚಿನ ಸಂಶೋಧನಾ ಚಟುವಟಿಕೆಗಳಿಗೆ ಸಹಕಾರಿಯಾಗುತ್ತದೆ ಎಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ ಪರಿನಿಯಮಗಳನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಸರ್ಕಾರದ ಹಂತದಲ್ಲಿ ಫಾಲೋಅಪ್ ಮಾಡಬೇಕು. ಇಲ್ಲವಾದಲ್ಲಿ ವಿಳಂಬವಾಗುತ್ತದೆ ಎಂದರು. ಪ್ರೊ.ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ಸರ್ಕಾರದ ಹಂತದಲ್ಲಿ ಪರಿನಿಯಮಗಳ ಅನುಮೋದನೆಗೆ ಫಾಲೋಅಪ್ ಮಾಡಲು ಒಂದು ಸಮಿತಿಯನ್ನು ರಚಿಸಬಹುದು ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಈ ಕೆಳಕಂಡ 20 ಪರಿನಿಯಮಗಳಿಗೆ ಅನುಮೋದನೆ ನೀಡಿದ ಸಭೆಯು ಸರ್ಕಾರದ ಹಂತದಲ್ಲಿ ಫಾಲೋಅಪ್ ಮಾಡಲು ಈ ಕೆಳಕಂಡಂತೆ ಸಮಿತಿ ರಚಿಸಲು ಸರ್ವಾನುಮತದಿಂದ ನಿರ್ಣಯಿಸಿತು.

1) ಸಿಂಡಿಕೇಟ್ ಸದಸ್ಯರು: ಶ್ರೀ ಕೆ.ಪಿ. ಶ್ರೀಪಾಲ್, ಶ್ರೀ. ಬಿ.ಎಸ್. ಶಶಿಧರ ಮತ್ತು ಶ್ರೀ ಮಸಾವೀರ್ ಬಾಷ, ಎಂ.,
2) ಪ್ರಾಧ್ಯಾಪಕರು: ಪ್ರೊ.ಎಸ್.ವಿ. ಕೃಷ್ಣಮೂರ್ತಿ ಮತ್ತು ಪ್ರೊ.ಹೆಚ್.ಎನ್. ರಮೇಶ
3) ಒಬ್ಬ ಅಧ್ಯಾಪಕೇತರ ಸಿಬ್ಬಂದಿ

ಸಭೆ ಪರಿಶೀಲಿಸಿ ಅನುಮೋದಿಸಿದ ಪರಿನಿಯಮಗಳು:

1) Statutes governing the establishment of Department of Post Graduate Studies and Research in Biochemistry at the University headquarter, Jnanasahyadri, Shankaraghatta and institution of Teaching and Non-Teaching Posts in the Department.

2) Statutes governing the establishment of the Post graduate Department of Studies and Research in Bioinformatics at the University headquarter Jnanasahyadri, Shankaraghatta and institution of teaching and non-teaching posts in the Department.

3) Statutes governing the establishment of the Post graduate Department of Studies and Research in Biotechnology at Kuvempu University, Sahyadri College Campus, Shivamogga, and institution of Teaching and Non-teaching posts in the Department.

4) Statutes governing the establishment of the Post graduate Department of Studies and Research in Business Administration at the University headquarter, Jnansahyadri, Shankaraghatta and institution of Teaching and Non teaching posts in the Department.

5) Statutes governing the establishment of the Post graduate department of studies and research in chemistry at Kuvempu University Post graduate Centre, Kadur and institution of Teaching and Non- teaching posts in the Department.

6) Statutes governing the establishment of Department of Post graduate Studies and Research in Commerce, at Kuvempu University Post graduate Centre, Kadur, and institution of teaching and non-teaching posts in the Department.

7) Statutes governing the establishment of the Department of Post graduate Studies and Research in Computer Science, at the University headquarter, Jnanasahyadri, Shankaraghatta and institution of teaching and non-teaching posts in the Department.

8) Statutes governing the establishment of Department of Post graduate Studies and Research in Tourism Administration, at the University headquarter, Jnanasahyadri, Shankaraghatta and institution of teaching and non-teaching posts in the department.

9) Statutes governing the establishment of the Post graduate Department of Studies and Research in Physical Education at the University headquarter, Jnanasahyadri, Shankaraghatta and institution of teaching and non teaching posts in the Department.



8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

10) Statutes governing the establishment of the Post graduate Department of Studies and Research in Journalism and Mass Communication at the university headquarter, Jnanasahyadri, Shankaraghatta and institution of teaching and non-teaching posts in the department.

11) Statutes governing the establishment of the Post graduate Department of Studies and Research in Commerce at the University headquarter, Jnanasahyadri, Shankaraghatta and institution of teaching and non-teaching posts in the Department.

12) Statutes governing the establishment of the Post graduate Department of Studies and Research in Master of Business Administration in Human Resource Management at the University headquarter, Jnanasahyadri, Shankaraghatta and institution of teaching and non-teaching posts in the Department.

13) Statutes governing the establishment of the Post graduate Department of Studies and Research in Microbiology at the University headquarter, Jnanasahyadri, Shankaraghatta and institution of teaching and non-teaching posts in the Department.

14) Statutes governing the establishment of the Post graduate Department of Studies and Research in Pharmaceutical Chemistry at the Kuvempu University post graduate centre, Kadur and institution of teaching and non-teaching posts in the department.

15) Statutes governing the establishment of Prasaranga in Kuvempu University and institution of posts in Prasaranga

16) Statutes governing the establishment of Post graduate programme in Remote Sensing Applications in the Post graduate Department of Applied Geology at the University headquarter, Jnanasahyadri, Shankaraghatta and institution of teaching and non-teaching posts in the Department

17) Statutes governing the institution of Research fellowships to SC/ST Research fellows in P.G. Departments of Kuvempu University

18) Statutes governing the establishment of the Post graduate Department of Studies and Research in Social Work at the Kuvempu University headquater, Jnanasahyadri, Shankaraghatta and institution of teaching and non-teaching posts at the Department.

19) The Kuvempu University Statute governing the establishment of Centre for Online Education (CoE) under the Directorate of Distance Education.

20) Draft Statute Governing the establishment of the post Graduate Course of studies & research in Wild Life Management in the Post Graduate Department of Applied Zoology at University Headquarters, Shankaraghatta and also institution of teaching and non-teaching posts in the said Department

Statutes governing the establishment of the Post- graduate Department of Studies and Research in Wildlife and Management at the University headquarter, Jnanasahyadri, Shankaraghatta and institution of teaching and non-teaching posts in the Department.

**5–ಸಿಂ–2.05:** ಸ್ನಾತಕ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ಆಂತರಿಕ ಮತ್ತು ಬಾಹ್ಯ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**25–ಸಿಂ–2.06:** ಸ್ನಾತಕೋತ್ತರ ಆಹಾರ ಮತ್ತು ತಂತ್ರಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಸಲ್ಲಿಸಲಾಗಿದ್ದ ಆಂತರಿಕ ಮತ್ತು ಬಾಹ್ಯ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2025–ಸಿಂ–2.07:** ಸ್ನಾತಕ ಮತ್ತು ಸ್ನಾತಕೋತ್ತರ ಹಿಂದಿ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ಮತ್ತು ಸ್ನಾತಕೋತ್ತರ ಹಿಂದಿ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ಆಂತರಿಕ ಮತ್ತು ಬಾಹ್ಯ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

## ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ

**2025–ಸಿಂ–2.08:** ಡಾ. ಶ್ರೀಶೈಲ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗ – ಇವರು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧ ಮಂಡನೆಗೆ ಭಾಗವಹಿಸಲು ಅನುಮೋದನೆ ನೀಡುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ.ಶ್ರೀಶೈಲರವರು ದಿನಾಂಕ:31–03–2025 ರಿಂದ 01–04–2025 ರವರೆಗೆ Amsterdam, Netherlands ಇಲ್ಲಿ ನಡೆಯುವ World Congress on Advances in Plant Science and Plant Biology ದಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಲು ಅನುಮತಿಸಿದ ಸಭೆಯು, ಪ್ರಯಾಣದ ದಿನಗಳು ಸೇರಿದಂತೆ ಅನ್ಯಕಾರ್ಯನಿಮಿತ್ತ ಮಂಜೂರು ಮಾಡಲು ಮತ್ತು ಪ್ರಯಾಣ ಭತ್ಯೆ/ದಿನಭತ್ಯೆಯ ಶೇ.50ರಷ್ಟನ್ನು ಹಾಗೂ ನೋಂದಣಿ ಶುಲ್ಕದ ಶೇ.50ಷ್ಟು ಅಥವಾ $200 ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ವಿಶ್ವವಿದ್ಯಾಲಯದ ಆರ್ಥಿಕ ಲಭ್ಯತೆಯ ಅನುಸಾರ ಯು.ಜಿ.ಸಿ. ನಿಯಮಗಳಡಿ ಪರಿಶೀಲಿಸಿ ಪಾವತಿಸಲು ಮಂಜೂರಾತಿ ನೀಡಲು ಸಭೆಯು ನಿರ್ಣಯಿಸಿತು.

**2025–ಸಿಂ–2.09:** Ming Chi University of Technology (MCUT), Taiwan ಇವರೊಂದಿಗೆ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯವು ಒಡಂಬಡಿಕೆ (MoU) ಮಾಡಿಕೊಳ್ಳುವ ಕುರಿತು.

**ನಿರ್ಣಯ:** ಕುವೆಂಪು ವಿಶ್ವವಿದ್ಯಾಲಯ (ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ) ಮತ್ತು Ming Chi University of Technology, Taiwan. ಸಂಸ್ಥೆಗಳ ಸಹಯೋಗದೊಂದಿಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಗೂ ಸಂಶೋಧನಾರ್ಥಿಗಳು ಮತ್ತು ಅಧ್ಯಾಪಕರನ್ನು International internship Pilot Program (IIPP) ಮತ್ತು (Taiwan Experience Education Program (TEEP) ಅಡಿಯಲ್ಲಿ ಪರಸ್ಪರ ವಿನಿಮಯ ಮಾಡಿಕೊಳ್ಳಲು ಹಾಗೂ Nano Biosensors ವಿಷಯಗಳ ವೈಜ್ಞಾನಿಕ, ಶೈಕ್ಷಣಿಕ ಮಾಹಿತಿ ಹಂಚಿಕೊಳ್ಳಲು, ಪರಸ್ಪರ ಸಹಭಾಗಿತ್ವದಲ್ಲಿ ಸಂಶೋಧನೆಯ ಅವಕಾಶಗಳನ್ನು ಬಳಸಿಕೊಂಡು ಪರಿಣಾಮಕಾರಿಯಾಗಿ ಸಂಶೋಧನಾ ಕಾರ್ಯಗಳನ್ನು ನಿರ್ವಹಿಸಲು ಒಡಂಬಡಿಕೆ ಮಾಡಿಕೊಳ್ಳಲು ಅನುಮತಿಸಿದ ಸಭೆಯು, ಒಡಂಬಡಿಕೆಯ ಅಗತ್ಯ ಪ್ರಕ್ರಿಯೆಗಳನ್ನು ಅಂತಿಮಗೊಳಿಸುವ ಸಲುವಾಗಿ ಮಾನ್ಯ ಕುಲಪತಿಗಳು, ಕುಲಸಚಿವರು ಮತ್ತು ಆಧ್ಯಕ್ಷರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ ಇವರು Research Center for Intelligent Medical Devices, Ming Chi University of Technology, Taiwan ಇಲ್ಲಿಗೆ ಹೋಗಿಬರಲು ಅನುಮತಿ ನೀಡಿ ಸರ್ವಾನುಮತದಿಂದ ನಿರ್ಣಯಿಸಿತು.

**2025–ಸಿಂ–2.10:** ಡಾ. ಎಂ.ಎ. ಶ್ರುತಿಕೀರ್ತಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ವಿಭಾಗ ಇವರು ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡನೆಗೆ ಭಾಗವಹಿಸಲು ಅನುಮೋದನೆ ನೀಡುವ ಕುರಿತು.

8/4/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

8/4

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪ್ರಾಧ್ಯಾಪಕರು ಮತ್ತು ವಿಭಾಗದ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ.ಎಂ.ಎ. ಶೃತಿಕೀರ್ತಿರವರು ದಿನಾಂಕ:26-06-2025 ರಿಂದ 30-06-2025ರವರೆಗೆ ನೇಪಾಳ ಸಂಸ್ಕೃತ ವಿಶ್ವವಿದ್ಯಾಲಯ, ಕಠ್ಮಂಡು ಇಲ್ಲಿ ನಡೆಯುವ 19ನೇ ವಿಶ್ವ ಸಂಸ್ಕೃತ ಸಮ್ಮೇಳನದಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಲು ಅನುಮತಿಸಿದ ಸಭೆಯು, ಪ್ರಯಾಣದ ದಿನಗಳು ಸೇರಿದಂತೆ ಅನ್ಯಕಾರ್ಯನಿಮಿತ್ತ ಮಂಜೂರು ಮಾಡಲು ಮತ್ತು ಪ್ರಯಾಣ ಭತ್ಯೆ/ದಿನಭತ್ಯೆಯ ಶೇ.50ರಷ್ಟನ್ನು ಹಾಗೂ ನೋಂದಣಿ ಶುಲ್ಕದ ಶೇ.50ಷ್ಟು ಅಥವಾ $200 ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ವಿಶ್ವವಿದ್ಯಾಲಯದ ಆರ್ಥಿಕ ಲಭ್ಯತೆಯ ಅನುಸಾರ ಯು.ಜಿ.ಸಿ. ನಿಯಮಗಳಡಿ ಪರಿಶೀಲಿಸಿ ಪಾವತಿಸಲು ಮಂಜೂರಾತಿ ನೀಡಲು ನಿರ್ಣಯಿಸಿತು.

2025-ಸಿಂ-2.10(ಎ): Ataavi Bird Foundation ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಇವರು Ataavi Bird Foundation Beach Haven No 1 Wing I F, Near Juhu Beach Mumbai, Maharashtra. ಇವರ ಸಹಭಾಗಿತ್ವದಲ್ಲಿ ಸಂಶೋಧನೆಯ ಅವಕಾಶಗಳನ್ನು ಬಳಸಿಕೊಳ್ಳಲು ಈ ಕೆಳಕಂಡ ಉದ್ದೇಶಗಳಿಗಾಗಿ Ataavi Bird Foundation ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

1. ವಿದ್ಯಾರ್ಥಿಗಳಿಗೆ ನೇತೃತ್ವದ ಮತ್ತು ಪರಿಸರ ಸಂರಕ್ಷಣೆಯ ಹೊಣೆಗಾರಿಕೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಅವಕಾಶ ಒದಗಿಸುವುದು.
2. ವಿಶ್ವವಿದ್ಯಾಲಯದ ಆವರಣದಲ್ಲಿ ಪಕ್ಷಿ ವೈವಿಧ್ಯತೆಯನ್ನು ಗಮನಿಸಿ ಮತ್ತು ಸಂರಕ್ಷಿಸಲು ಪಕ್ಷಿ ವೀಕ್ಷಕರ ಸಮುದಾಯವನ್ನು ಬೆಳೆಸುವುದು
3. ಶೈಕ್ಷಣಿಕ ಜಾಗೃತಿ ಕಾರ್ಯಕ್ರಮಗಳು ಮತ್ತು ಪಕ್ಷಿ ವೀಕ್ಷಣಾ ಕಾರ್ಯಕ್ರಮಗಳನ್ನು ಆಯೋಜಿಸುವುದು
4. ಪಕ್ಷಿ ಸ್ನೇಹಿ ಹಾಗೂ ಹಸಿರು – ಸಂಸ್ಥಿತಶೀಲ ಆವರಣವನ್ನು ನಿರ್ಮಿಸುವುದು
5. ವಿದ್ಯಾರ್ಥಿಗಳನ್ನು ಸಂರಕ್ಷಣಾ ಜಾಗೃತಿಗಾಗಿ ಅಗತ್ಯವಾದ ಜ್ಞಾನ ಮತ್ತು ಉಪಕರಣಗಳೊಂದಿಗೆ ಸಶಕ್ತಗೊಳಿಸುವುದು.

025-ಸಿಂ-2.10(ಬಿ): Bombay Natural History Society (BNHS) Liongate, Mumbai ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ವಿಭಾಗವು Bombay Natural History Society (BNHS) Liongate, Mumbai, Maharashtra ಇವರ ಸಹಭಾಗಿತ್ವದಲ್ಲಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಸೇವೆಗಳ ಗುಣಮಟ್ಟವನ್ನು ಉತ್ತೇಜಿಸಲು ಹಾಗೂ ಜೀವವೈವಿಧ್ಯತೆಯ ಸಂರಕ್ಷಣೆ ಮತ್ತು ಪರಿಸರ ವಿಜ್ಞಾನ ಕ್ಷೇತ್ರದಲ್ಲಿ ಸಹಭಾಗಿತ್ವದಿಂದಾಗುವ ಪರಸ್ಪರ ಲಾಭಗಳನ್ನು ಅರಿತುಕೊಳ್ಳಲು ಈ ಕೆಳಗಿನ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿಯ ಉದ್ದೇಶಕ್ಕಾಗಿ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.

1. ಜೀವವೈವಿಧ್ಯತೆಯ ಸಂರಕ್ಷಣೆ, ಪರಿಸರ ಅಧ್ಯಯನ ಮತ್ತು ನೈಸರ್ಗಿಕ ಇತಿಹಾಸ ಕ್ಷೇತ್ರಗಳಲ್ಲಿ ಸಂಯುಕ್ತ ಸಂಶೋಧನಾ ಯೋಜನೆಗಳು ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.
2. ಸಂಶೋಧನಾ ಪ್ರಬಂಧಗಳು, ಇಂಟರ್ನ್‌ಷಿಪ್, ಪ್ರಾಜೆಕ್ಟ್‌ಗಳು ಮತ್ತು ವಿಶೇಷ ತರಬೇತಿ ಕಾರ್ಯಕ್ರಮಗಳಿಗಾಗಿ ವಿದ್ಯಾರ್ಥಿಗಳು ಮತ್ತು ಬೋಧಕ ವೃಂದದ ಪರಸ್ಪರ ವಿನಿಮಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಕಾರ್ಯಕ್ರಮಗಳನ್ನು ಉತ್ತೇಜಿಸುವುದು

3. ಜ್ಞಾನ ಹಂಚಿಕೆ ಮತ್ತು ಸಾಮರ್ಥ್ಯ ವೃದ್ಧಿಗಾಗಿ ಸಂಯುಕ್ತ ಕಾರ್ಯಗಾರಗಳು, ಸೆಮಿನಾರ್‌ಗಳು ಮತ್ತು ಕಮ್ಮಟಗಳನ್ನು ಆಯೋಜಿಸುವುದು.
4. Bombay Natural History Society (BNHS) Liongate, Mumbai ಮತ್ತು ಕುವೆಂಪು ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಸಂಶೋಧನಾ ಮೂಲ ಸೌಕರ್ಯ ಹಾಗೂ ಪರಿಣಿತಿಯನ್ನು ವೈಜ್ಞಾನಿಕ ಅಧ್ಯಯನಗಳು ಮತ್ತು ಸಂರಕ್ಷಣಾ ಯೋಜನೆಗಳಿಗೆ ಬಳಸಲು ಅವಕಾಶ ಒದಗಿಸುವುದು.
5. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಅನುದಾನದ ಅವಕಾಶಗಳಿಗಾಗಿ ಸಂಯುಕ್ತ ಸಂಶೋಧನಾ ಪ್ರಸ್ತಾವನೆಗಳನ್ನು ಅಭಿವೃದ್ಧಿಪಡಿಸುವುದು.
6. ಪರಿಸರ ಜಾಗೃತಿ ಮತ್ತು ಸಂರಕ್ಷಣಾ ಉಪಕ್ರಮಗಳಿಗಾಗಿ ಸಮುದಾಯ ಸಂಪರ್ಕ ಕಾರ್ಯಕ್ರಮಗಳನ್ನು ಉತ್ತೇಜಿಸುವುದು.

**2025–ಸಿಂ–2.10(ಸಿ):** Bridge Water State University ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಅಧ್ಯಾಪಕರು, ಸಂಶೋಧನಾರ್ಥಿಗಳು, ವಿದ್ಯಾರ್ಥಿಗಳು, ಶೈಕ್ಷಣಿಕ/ಸಂಶೋಧನೆ/ಆಡಳಿತಾತ್ಮಕ ವಿಷಯಗಳನ್ನು ವಿನಿಮಯ ಮಾಡಿಕೊಳ್ಳಲು ಅನುಕೂಲವಾಗುವುದರಿಂದ, ಒಡಂಬಡಿಕೆ ಮಾಡಿಕೊಳ್ಳಲು The President Bridge Water State University, Public Institution of Higher Education and agency of the Commonwealth of Massachusetts, USA ಇವರೊಂದಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಪತಿಗಳು ಸದರಿ ವಿಶ್ವವಿದ್ಯಾಲಯದೊಂದಿಗೆ ದಿನಾಂಕ:12–02–2025ರಂದು ಒಡಂಬಡಿಕೆ ಮಾಡಿಕೊಂಡಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ಶೈಕ್ಷಣಿಕ ವಿಭಾಗ

**2025–ಸಿಂ–2.11:** ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ – ಈ ಕಾಲೇಜಿನ "ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ" ಅಧ್ಯಯನ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನವೀಕರಿಸುವ ಕುರಿತು.

**ಚರ್ಚೆ:** ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ, ಭದ್ರಾವತಿ – ಇಲ್ಲಿನ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನವೀಕರಿಸುವ ಸಂಬಂಧ ದಿನಾಂಕ:12–12–2024ರಂದು ಪರಿಣಿತ ತಜ್ಞರ ಸಮಿತಿ ಕಾಲೇಜಿಗೆ ಭೇಟಿ ನೀಡಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು. ತಜ್ಞರ ಸಮಿತಿಯ ಅಧ್ಯಕ್ಷರಾಗಿದ್ದ ಪ್ರೊ. ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ಸಮಿತಿಯು ಕಾಲೇಜಿಗೆ ಭೇಟಿ ನೀಡಿ ಸಂಶೋಧನಾ ಕೇಂದ್ರಕ್ಕೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿದೆ. ಆದರೆ, ಕಾಲೇಜಿನಲ್ಲಿ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪಿಹೆಚ್.ಡಿ. ಅರ್ಹತೆ ಹೊಂದಿರುವ ಯಾವುದೇ ಖಾಯಂ ಬೋಧಕರಿಲ್ಲ, ಸಂಶೋಧನಾ ಮಾರ್ಗದರ್ಶಕರಿಲ್ಲ. ಸಂಶೋಧನಾ ಪ್ರಯೋಗಾಲಯ ಕೂಡ ಸುಸಜ್ಜಿತವಾಗಿಲ್ಲ. ಒಟ್ಟಾರೆ ಸಂಶೋಧನಾ ಕೇಂದ್ರಕ್ಕೆ ಅಗತ್ಯವಿರುವ ಕನಿಷ್ಟ ಮೂಲ ಸೌಲಭ್ಯಗಳು ಕೂಡ ಇಲ್ಲದ ಹಿನ್ನೆಲೆಯಲ್ಲಿ ಸಂಶೋಧನಾ ಕೇಂದ್ರದ ನವೀಕರಣಕ್ಕೆ ಸಮಿತಿಯು ಶಿಫಾರಸ್ಸು ಮಾಡಿಲ್ಲ. ಆದರೆ, ಪ್ರಸ್ತುತ ಇರುವ ಸಂಶೋಧನಾರ್ಥಿಗಳು ಪಿಹೆಚ್.ಡಿ. ಸಂಶೋಧನೆ ಪೂರ್ಣಗೊಳಿಸಲು ವಿಶ್ವವಿದ್ಯಾಲಯವು ಅವಕಾಶ ನೀಡುವಂತೆ ಸಮಿತಿಯು ಶಿಫಾರಸ್ಸು ಮಾಡಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ, ಭದ್ರಾವತಿ – ಇಲ್ಲಿನ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಂಶೋಧನಾ ಕೇಂದ್ರದ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲೆ.

ಮಾನ್ಯತೆಯನ್ನು ನವೀಕರಿಸಲು ದಿನಾಂಕ:12-12-2024ರಂದು ಪರಿಣಿತ ತಜ್ಞರ ಸಮಿತಿ ಕಾಲೇಜಿಗೆ ಭೇಟಿ ನೀಡಿ ಸಲ್ಲಿಸಿದ ವರದಿಯನ್ನು ಅಂಗೀಕರಿಸಿದ ಸಭೆಯು, ಪ್ರಸ್ತುತ ಕಾಲೇಜಿನ ಸಂಶೋಧನಾ ಕೇಂದ್ರದಲ್ಲಿ ಪಿಹೆಚ್.ಡಿ. ಸಂಶೋಧನೆ ಕೈಗೊಂಡಿರುವವರಿಗೆ ಸಂಶೋಧನೆ ಪೂರ್ಣಗೊಳಿಸಲು ಅವಕಾಶ ಕಲ್ಪಿಸಬೇಕೆಂದು ಸಭೆಯು ನಿರ್ಣಯಿಸಿತು.

**2025-ಸಿಂ-2.11(ಎ):** ಸೆಂಟ್ರಲ್ ಕಾಫಿ ರೀಸರ್ಚ್ ಇನ್ಸಿಟ್ಯೂಟ್, ಬಾಳೆಹೊನ್ನೂರು- ಈ ಸಂಸ್ಥೆಯ "ಅನ್ವಯಿಕ ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರ" ವಿಭಾಗಗಳಿಗೆ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನವೀಕರಿಸುವ ಕುರಿತು.

**ನಿರ್ಣಯ:** ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನಲ್ಲಿರುವ ಸೆಂಟ್ರಲ್ ಕಾಫಿ ರೀಸರ್ಚ್ ಇನ್ಸಿಟ್ಯೂಟ್ ಸಂಸ್ಥೆಯ ಅನ್ವಯಿಕ ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರ ವಿಭಾಗಗಳಿಗೆ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನವೀಕರಿಸುವ ಸಲುವಾಗಿ ದಿನಾಂಕ: 21-02-2025ರಂದು ತಜ್ಞ ಪರಿಣಿತರ ಸಮಿತಿಯು ಪರಿಶೀಲನೆಗಾಗಿ ಭೇಟಿ ನೀಡಿ ಸಲ್ಲಿಸಿದ ವರದಿಯನ್ನು ಅಂಗೀಕರಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

## ಇಂಜಿನಿಯರಿಂಗ್ ವಿಭಾಗ

**2025-ಸಿಂ-2.12:** ದಿನಾಂಕ:05-12-2024 ರಂದು ನಡೆದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸುತ್ತಿರುವ ಕುರಿತು.

**ಚರ್ಚೆ:** ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:05-12-2024 ರಂದು ನಡೆದ ಕಟ್ಟಡ ಸಮಿತಿ ಸಭೆಯ ನಡಾವಳಿಗಳನ್ನು ಕುಲಸಚಿವರು ಸಭೆಯ ಅನುಮೋದನೆಗಾಗಿ ಮಂಡಿಸಿದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ವಿಷಯ ಸಂಖ್ಯೆ:2020:ಕಟ್ಟಡ:01 ರ ಕುರಿತು ಮಾತನಾಡಿ, ಕೆಲವು ಅಂದಾಜುಗಳು ಅಧಿಕವಾಗಿದೆ. ಇದನ್ನು ಪರಿಷ್ಕರಿಸಬೇಕು ಎಂದರು. ಮಾನ್ಯ ಕುಲಪತಿಯವರು ಮಾಹಿತಿ ನೀಡಿ, ಮೂಲ ಪ್ರಸ್ತಾವನೆಯಲ್ಲಿ ದರಗಳು ಇನ್ನೂ ಅಧಿಕವಾಗಿದ್ದವು. ಕಟ್ಟಡ ಸಮಿತಿ ಸಭೆಯಲ್ಲಿ ಅವುಗಳನ್ನು ಪರಿಶೀಲಿಸಿ ಪರಿಷ್ಕರಿಸಲಾಗಿದೆ ಎಂದರು. ಸದಸ್ಯರಾದ ಶ್ರೀ ಶಿವಕುಮಾರ್ ಎಂ., ಶ್ರೀ ಶಾಂತಕುಮಾರ್ ಹಾಗೂ ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ ಅನುದಾನದ ಲಭ್ಯತೆ ಬಗ್ಗೆ ಮಾಹಿತಿ ಕೇಳಿದರು. ವಿಶೇಷ ಆಹ್ವಾನಿತರಾಗಿದ್ದ ಹಣಕಾಸು ಅಧಿಕಾರಿಗಳು ಮಾಹಿತಿ ನೀಡುತ್ತಾ, ವಿಶ್ವವಿದ್ಯಾಲಯ ಅಭಿವೃದ್ಧಿ ಅನುದಾನ ಲಭ್ಯವಿದ್ದು, ನ್ಯಾಕ್ ಪೀರ್ ಸಮಿತಿ ಭೇಟಿ ಹಿನ್ನೆಲೆಯಲ್ಲಿ ತುರ್ತು ಕೆಲಸ ನಿರ್ವಹಿಸುವ ಕುರಿತು ಈ ಹಿಂದೆ ಹಲವಾರು ಸಭೆಗಳು ನಡೆದಿದ್ದು, ಸಭೆಗಳಲ್ಲಿ ಚರ್ಚಿಸಿ ಅನುದಾನ ಮೀಸಲಿಡಲಾಗಿದೆ ಎಂದರು.

ಶ್ರೀ ಶಶಿಧರ ಬಿ.ಎನ್. ಮತ್ತು ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ನಿರ್ವಹಿಸಲಾದ ಕಾಮಗಾರಿಗಳ ಮೂರನೇ ವ್ಯಕ್ತಿ ಪರಿಶೀಲನೆ (Third Party Inspection) ನಡೆಸಲಾಗುತ್ತದೆಯೇ ಎಂದು ಕೇಳಿದರು. ಸಭೆಗೆ ಆಹ್ವಾನಿಸಲಾಗಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ಕಾಳರಾಜು ರವರು ಮಾಹಿತಿ ನೀಡುತ್ತಾ, ವಿಶ್ವವಿದ್ಯಾಲಯದಲ್ಲಿಯೇ ಇಂಜಿನಿಯರ್ರಿಂಗ್ ವಿಭಾಗವಿದ್ದು, ತಾಂತ್ರಿಕ ಸಿಬ್ಬಂದಿ ಇರುವುದರಿಂದ ಮೂರನೇ ವ್ಯಕ್ತಿ ಪರಿಶೀಲನೆ ಅಗತ್ಯವಿಲ್ಲ ಎಂದರು. ಮುಂದುವರೆದು ಮಾತನಾಡಿದ ಶ್ರೀ ಬಿ.ಎನ್.ಶಶಿಧರ್‌ರವರು ಒಟ್ಟು 404.50 ಲಕ್ಷಗಳ ಕಾಮಗಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸಿದೆ. ಇಷ್ಟೊಂದು ಮೊತ್ತದ ಅನುದಾನ ಲಭ್ಯವಿದೆಯೇ? ಕೆಲವು ಕಾಮಗಾರಿಗಳನ್ನು ತುಂಡು ಗುತ್ತಿಗೆ ಮೂಲಕ ಕೈಗೊಳ್ಳುವುದಾಗಿ ತಿಳಿಸಲಾಗಿದೆ. ಆದರೆ, ತುಂಡುಗುತ್ತಿಗೆ ಬದಲಾಗಿ ಎಲ್ಲವನ್ನೂ ಕ್ರೋಢೀಕರಿಸಿ ಇ-ಟೆಂಡರ್ ಮಾಡಬಹುದು ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ನ್ಯಾಕ್ ಸಮಿತಿ ಭೇಟಿಗೆ ಕೆಲವೇ ದಿನಗಳು ಬಾಕಿ ಇದೆ. ಇ-ಟೆಂಡರ್ ಕರೆದು, ಅಂತಿಮಗೊಳಿಸಲು ವಿಳಂಬವಾಗುತ್ತದೆ. ತುಂಡು ಗುತ್ತಿಗೆ ಮೂಲಕ ಬೇಗನೆ ನಿರ್ವಹಿಸಬಹುದು. ಕೆಲವು ಮಧ್ಯಮ ಗಾತ್ರದ ಕಾಮಗಾರಿಗಳನ್ನು ಕೂಡ ವಿವಿಧ ಹಂತಗಳಲ್ಲಿ ಬೇರ್ಪಡಿಸಿ ತುಂಡುಗುತ್ತಿಗೆ ಮೂಲಕ ನಿರ್ವಹಿಸಿದಲ್ಲಿ ಬೇಗನೇ ಮುಗಿಯುತ್ತವೆ. ಅಲ್ಲದೇ, ಸರ್ಕಾರಿ ಸ್ವಾಮ್ಯದ ಕೆ.ಆರ್.ಐ.ಡಿ.ಎಲ್. ಮೂಲಕ ನಿರ್ವಹಿಸಿದಲ್ಲಿ ಕೂಡ ಬೇಗನೆ ಮುಗಿಸಲು ಅನುಕೂಲವಾಗುತ್ತದೆ ಎಂದರು.

8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಶ್ರೀ ಕಾಳರಾಜ ರವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ನ್ಯಾಕ್ ಸಮಿತಿ ಭೇಟಿ ಹಿನ್ನೆಲೆಯಲ್ಲಿ ಅಗತ್ಯ ಮೂಲಭೂತ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನವಡಿಯಲ್ಲಿ ಅನುದಾನ ಒದಗಿಸಿದೆ. ರೂ.5.00 ಲಕ್ಷದೊಳಗಿನ ಕಾಮಗಾರಿಗಳನ್ನು ತುಂಡು ಗುತ್ತಿಗೆ ಮೂಲಕ ಕೈಗೊಳ್ಳಲಾಗಿದೆ. ಉಳಿದಂತೆ ರೂ.180ಲಕ್ಷಗಳ ಕಾಮಗಾರಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ ಮುಂದಿನ ದಿನಗಳಲ್ಲಿ ಟೆಂಡರ್ ಕರೆಯುವ ಮೊದಲು ಟೆಂಡರ್ ಪರಿಶೀಲನಾ ಸಭೆಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಕಟ್ಟಡ ಸಮಿತಿ ಮತ್ತು ಸಿಂಡಿಕೇಟ್ ಅನುಮೋದನೆ ಪಡೆದುಕೊಂಡು ಇ-ಟೆಂಡರ್ ಕರೆಯುವಂತೆ ಕೋರಿದರು. ಕುಲಸಚಿವರು ಮಾತನಾಡಿ ಇಲ್ಲಿ ನಮೂದಿಸಿರುವ ಎಲ್ಲಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಿಲ್ಲ. ಪ್ರಸ್ತುತ ನ್ಯಾಕ್ ಪೀರ್ ಸಮಿತಿ ಭೇಟಿ ಹಿನ್ನೆಲೆಯಲ್ಲಿ ತುರ್ತು ಅಗತ್ಯವಿರುವ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲಾಗುವುದು. ಉಳಿದ ಕಾಮಗಾರಿಗಳನ್ನು ಹಣಕಾಸಿನ ಲಭ್ಯತೆ ಆಧರಿಸಿ ಮುಂದಿನ ದಿನಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದರು. ಶ್ರೀ ಬಿ.ಎನ್. ಶಶಿಧರ್‌ರವರು ಮಾತನಾಡಿ, ಇದರಲ್ಲಿ ನಮೂದಿಸಿರುವಂತೆ ಈಗಾಗಲೇ ಮುಗಿದಿರುವ ಕಾಮಗಾರಿಗಳು, ಟೆಂಡರ್ ಆಗಿರುವ ಕಾಮಗಾರಿಗಳು ಮತ್ತು ಚಾಲ್ತಿಯಲ್ಲಿರುವ ಕಾಮಗಾರಿಗಳ ವಿವರವನ್ನು ಮುಂದಿನ ಸಭೆಗೆ ಒದಗಿಸುವಂತೆ ಕೋರಿದರು.

ಕಟ್ಟಡ ಸಮಿತಿ ಸಭೆಯ ನಡಾವಳಿಗಳ ವಿಷಯ ಸಂಖ್ಯೆ:2022:ಕಟ್ಟಡ:02ರ ಕುರಿತಾಗಿ ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಸೋಲಾರ್ ವಿದ್ಯುತ್ ಯೋಜನೆಯು ಸುಮಾರು ರೂ.4.00ಕೋಟಿಗಳ ಮೊತ್ತದ ಯೋಜನೆಯಾಗಿದೆ. ಇದಕ್ಕೆ ಅನುದಾನವನ್ನು ಹೇಗೆ ಒದಗಿಸಲಾಗುತ್ತದೆ? ವಿವಿಧ ಕಟ್ಟಡಗಳ ಮೇಲ್ಛಾವಣಿಯಲ್ಲಿ ಸೋಲಾರ್ ಫಲಕಗಳನ್ನು ಅಳವಡಿಸಲು ಒಂದು ಚದರಡಿಗೆ ಎಷ್ಟು ವೆಚ್ಚವಾಗುತ್ತದೆ ಎಂದು ನಿರ್ದಿಷ್ಟವಾದ ಮತ್ತು ವಿವರವಾದ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಎಂದರು. ಶ್ರೀ ಅರವಿಂದ್ ರವರು ಮಾತನಾಡಿ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಈ ಉದ್ದೇಶಕ್ಕಾಗಿ ಸಾಲ ಸಿಗುತ್ತದೆ. ಸೋಲಾರ್ ಫಲಕಗಳಿಗೆ 25 ವರ್ಷ ವಾರಂಟಿ ಅವಧಿ ಇರುತ್ತದೆ. ಆದರೆ, ಈಗ ಬರುತ್ತಿರುವ ವಿದ್ಯುತ್ ಬಿಲ್ಲಿನ ಮೊಬಲಗನ್ನು ಪರಿಗಣಿಸಿದರೆ ನಾಲ್ಕೈದು ವರ್ಷಗಳಲ್ಲಿ ಸಾಲವನ್ನು ಮರುಪಾವತಿಸಬಹುದು ಎಂದರು. ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಜಾಗ ಕೊಟ್ಟರೆ, ಅವರೇ ಉಚಿತವಾಗಿ ಅಳವಡಿಸಿ ವಿದ್ಯುತ್ ಒದಗಿಸುವ ಸಂಸ್ಥೆಗಳಿದ್ದು, ಅವುಗಳನ್ನು ಪರಿಗಣಿಸಿದರೆ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಪರಿಸರದ ದೃಷ್ಟಿಯಿಂದ ಕೂಡ ಇದೊಂದು ಉತ್ತಮ ಯೋಜನೆಯಾಗಿದ್ದು, ಇದರಿಂದ ಬಹಳಷ್ಟು ಅನುಕೂಲಗಳಿವೆ. ಆರ್ಥಿಕವಾಗಿ ವಿಶ್ವವಿದ್ಯಾಲಯಕ್ಕೆ ಉಳಿತಾಯವಾಗುತ್ತದೆ. ಈ ಯೋಜನೆಯ ಕುರಿತಾಗಿ ಮೂರು ಸಂಸ್ಥೆಗಳು ಮುಂದೆ ಬಂದಿವೆ ಎಂದರು.

ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳ ಕ್ರಮ ಸಂಖ್ಯೆ: 1ರ ಕ್ಷೇತ್ರೀಯ ಇಂಜಿನಿಯರ್‌ನ್ನು ನೇಮಕ ಮಾಡಿಕೊಳ್ಳುವ ಕುರಿತು ಚರ್ಚಿಸಲಾಗಿ, ಈಗಾಗಲೇ ಇಂಜಿನಿಯರಿಂಗ್ ವಿಭಾಗದಲ್ಲಿ ಸಾಕಷ್ಟು ತಾಂತ್ರಿಕ ಸಿಬ್ಬಂದಿಗಳಿರುವುದರಿಂದ ಹಾಗೂ ಸದ್ಯದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಹೆಚ್ಚುವರಿಯಾಗಿ ಕ್ಷೇತ್ರೀಯ ಇಂಜಿನಿಯರ್‌ನ್ನು ನೇಮಿಸಿಕೊಳ್ಳುವ ಅಗತ್ಯವಿಲ್ಲ ಎಂದರು.

**ನಿರ್ಣಯ:** ಸೋಲಾರ್ ಫಲಕ ಅಳವಡಿಕೆಯ ಕುರಿತು ಸುಧೀರ್ಘವಾಗಿ ಚರ್ಚಿಸಿದ ನಂತರ, ಇದೊಂದು ಉತ್ತಮವಾದ ಯೋಜನೆಯಾಗಿದ್ದು, ಸೂಕ್ತವಾಗಿ ನಿರ್ಣಯಿಸಿ ಕಾರ್ಯರೂಪಕ್ಕೆ ತರಬೇಕಾಗಿರುವ ಹಿನ್ನೆಲೆಯಲ್ಲಿ, ಪೂರ್ಣ ವಿವರಗಳನ್ನು ಮುಂದಿನ ಸಭೆಗೆ ಒದಗಿಸುವಂತೆ ನಿರ್ಣಯಿಸಲಾಯಿತು. ಉಳಿದಂತೆ, ದಿನಾಂಕ:05-12-2024ರಂದು ನಡೆದ ಕಟ್ಟಡ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲಾಯಿತು.

## ಪರೀಕ್ಷಾ ವಿಭಾಗ

**2025-ಸಿಂ-2.13:** 26-12-2024ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

8/4/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ನಿರ್ಣಯ: ಸೆಪ್ಟಂಬರ್/ಅಕ್ಟೋಬರ್–2024ರ ಮಾಹೆಗಳಲ್ಲಿ ನಡೆದ ಪದವಿ ಪರೀಕ್ಷೆಗಳಲ್ಲಿ ಅಕ್ರಮ ಎಸಗಿರುವ ವಿದ್ಯಾರ್ಥಿಗಳಿಗೆ ದಿನಾಂಕ:26–12–2024ರಂದು ನಡೆದ ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿಯ ಸಭೆಯಲ್ಲಿ ವಿಚಾರಣೆ ನಡೆಸಲಾಗಿದ್ದು, ತಪ್ಪಿತಸ್ಥ ವಿದ್ಯಾರ್ಥಿಗಳಿಗೆ ದಂಡ ವಿಧಿಸಿದ್ದು, ಅವರು ಮುಂದಿನ ಪರೀಕ್ಷೆ ತೆಗೆದುಕೊಳ್ಳಲು ಅನುಕೂಲವಾಗುವಂತೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ವಿದ್ಯಾರ್ಥಿಗಳಿಗೆ ನಿರ್ಣಯ ಪತ್ರಗಳನ್ನು ಕಳುಹಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2025–ಸಿಂ–2.14:** ಶ್ರೀಮತಿ ಶಕುಂತಲ ಕೆ.ಜಿ.ಎನ್. ಪ್ರಥಮ ದರ್ಜೆ ಸಹಾಯಕರು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಇವರನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ.

ಚರ್ಚೆ: ಕುಲಸಚಿವರು ಮಾತನಾಡಿ, ಶ್ರೀಮತಿ ಶಕುಂತಲ ಕೆ.ಜಿ.ಎನ್. ಪ್ರಥಮ ದರ್ಜೆ ಸಹಾಯಕರು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕುವೆಂಪು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಸದರಿಯವರ ಮನವಿಯ ಮೇರೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಮಾನ್ಯ ಮುಖ್ಯಮಂತ್ರಿಯವರ ಟಿಪ್ಪಣಿಯನ್ನು ಲಗತ್ತಿಸಿ, ಶ್ರೀಮತಿ ಶಕುಂತಲ ಕೆ.ಜಿ.ಎನ್. ಪ್ರಥಮ ದರ್ಜೆ ಸಹಾಯಕರು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಇವರನ್ನು ವರ್ಗಾಯಿಸಲು ಕುವೆಂಪು ವಿಶ್ವವಿದ್ಯಾಲಯದಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆ ಖಾಲಿ ಇದೆಯೇ? ಎಂಬ ಬಗ್ಗೆ ಮಾಹಿತಿಯನ್ನು ಹಾಗೂ ಸದರಿಯವರನ್ನು ಕುವೆಂಪು ವಿಶ್ವವಿದ್ಯಾಲಯದ ಸೇವೆಗೆ ತೆಗೆದುಕೊಳ್ಳುವ ಬಗ್ಗೆ ಸಿಂಡಿಕೇಟ್ ನಿರ್ಣಯದೊಂದಿಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಕೇಳಿರುತ್ತಾರೆ. ರಾಣಿಚೆನ್ನಮ್ಮ ವಿಶ್ವವಿದ್ಯಾಲಯವು ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ವರ್ಗಾವಣೆ ಬಯಸುವ ವಿಶ್ವವಿದ್ಯಾಲಯದಿಂದ ಹುದ್ದೆ ರಹಿತವಾಗಿ ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದು ಸಲ್ಲಿಸಿದಲ್ಲಿ ವರ್ಗಾವಣೆ ವಿಷಯದ ಕುರಿತು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತದೆ.

ಸರ್ಕಾರದಿಂದ ಕುವೆಂಪು ವಿಶ್ವವಿದ್ಯಾಲಯಕ್ಕೆ 55 ಪ್ರಥಮ ದರ್ಜೆ ಸಹಾಯಕ ಹುದ್ದೆಗಳು ಮಂಜೂರಾಗಿದ್ದು, ವೃಂದ ಮತ್ತು ನೇಮಕಾತಿ ಪರಿನಿಯಮದನ್ವಯ ಶೇಕಡ 50 ಹುದ್ದೆಗಳು ನೇರ ನೇಮಕಾತಿಗಾಗಿ (27 ಹುದ್ದೆಗಳು) ಹಾಗೂ ಶೇಕಡ 50 ಹುದ್ದೆಗಳನ್ನು ಬಡ್ತಿಗಾಗಿ (28 ಹುದ್ದೆಗಳು) ಮೀಸಲಿರಿಸಲಾಗಿರುತ್ತದೆ. ನೇರ ನೇಮಕಾತಿಗೆ ಲಭ್ಯವಿರುವ ಹುದ್ದೆಗಳು ವಿಶ್ವವಿದ್ಯಾಲಯವು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿರುವುದಿಲ್ಲ. ನೇಮಕವಾಗಿರುವ ಸಿಬ್ಬಂದಿಗಳ ನಿವೃತ್ತಿ/ಮುಂಬಡ್ತಿಯಿಂದ ಕೆಲವು ಹುದ್ದೆಗಳು ತೆರವಾಗಿದ್ದು 2018ರಲ್ಲಿ ಅನುಕಂಪ ಆಧಾರಿತ 01 ಮತ್ತು ಹೈದ್ರಾಬಾದ್ ಕರ್ನಾಟಕ ಮೀಸಲಾತಿಯ 03 ಸೇರಿದಂತೆ ಒಟ್ಟು 04 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, ನೇರ ನೇಮಕಾತಿಯ 23 ಹುದ್ದೆಗಳು ಖಾಲಿ ಉಳಿದಿರುತ್ತದೆ.

ಕಿರಿಯ ಸಹಾಯಕ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 118 ನೌಕರರುಗಳಲ್ಲಿ ಬಹಳಷ್ಟು ನೌಕರರು ಕಳೆದ 15 ರಿಂದ 20 ವರ್ಷಗಳಿಂದ ಕಿರಿಯ ಸಹಾಯಕ ಹುದ್ದೆಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳು ನಿವೃತ್ತಿ ಅಂಚಿನಲ್ಲಿರುತ್ತಾರೆ. ಬಹಳಷ್ಟು ನೌಕರರು ಪ್ರಥಮ ದರ್ಜೆ ಸಹಾಯಕ ಹುದ್ದೆಯ ವೇತನ ಶ್ರೇಣಿಯ ಹಂತವನ್ನು ತಲುಪಿದ್ದು, ಅವರುಗಳಿಗೆ ಸೇವಾವಧಿಯಲ್ಲಿ ಒಂದು ಬಡ್ತಿಯನ್ನಾದರೂ ನೀಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ ನೇರ ನೇಮಕಾತಿಗಾಗಿ ಖಾಲಿ ಇರುವ 23 ಪ್ರಥಮ ದರ್ಜೆ ಸಹಾಯಕ ಹುದ್ದೆಗಳನ್ನು ಒಂದು ಬಾರಿಗೆ ಫ್ರೀಜ್ ಮಾಡಿ ಬಡ್ತಿಗಾಗಿ ಪರಿವರ್ತಿಸಿಕೊಳ್ಳಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಮೇಲ್ಕಂಡ ಹಿನ್ನೆಲೆಯಲ್ಲಿ, ಶ್ರೀಮತಿ ಶಕುಂತಲ ಕೆ.ಜಿ.ಎನ್. ಇವರಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಕುರಿತಾಗಿ ಸಭೆಗೆ ಮಂಡಿಸಲಾಗಿದೆ ಎಂದು ಕುಲಸಚಿವರು ಮಾಹಿತಿ ನೀಡಿದರು.

ಶ್ರೀ ಬಿ.ಎನ್.ಶಶಿಧರರವರು ಮಾತನಾಡಿ, ಅವರು ಹುದ್ದೆರಹಿತವಾಗಿ ಬರುವುದರಿಂದ ಇಲ್ಲಿನ ನೌಕರರಿಗೆ ಬಡ್ತಿಯಲ್ಲಿ ಒಂದು ಹುದ್ದೆ ಕಡಿಮೆಯಾಗುತ್ತದೆ. ಕುಲಸಚಿವರು ತಿಳಿಸಿರುವಂತೆ ಸುಮಾರು



8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕಳೆದ 15 ರಿಂದ 20 ವರ್ಷಗಳಿಂದ ಕಿರಿಯ ಸಹಾಯಕ ಹುದ್ದೆಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದು ನಿವೃತ್ತಿ ಅಂಚಿನಲ್ಲಿರುತ್ತಾರೆ. ಕೆಲ ನೌಕರರು ಈಗಾಗಲೇ ಒಂದೇ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿಯಾಗಿದ್ದಾರೆ. ಇಲ್ಲಿನ ನೌಕರರಿಗೆ ಅನ್ಯಾಯವಾಗುವುದರಿಂದ ಅನುಮತಿ ನೀಡಬಾರದು ಎಂದರು. ಪ್ರೊ. ಎಸ್.ವಿ. ಕೃಷ್ಣಮೂರ್ತಿ, ಡಾ.ಎಂ.ಮಧು ಮತ್ತು ಶ್ರೀ ಶಾಂತಕುಮಾರ್‌ರವರು ಕೂಡ ಇದಕ್ಕೆ ಧ್ವನಿಗೂಡಿಸಿದರು. ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಬಹಳ ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕೇತರ ನೌಕರರ ನೇಮಕವಾಗಿಲ್ಲ. ಒಬ್ಬ ಅನುಭವಿ ನೌಕರರು ಬರುವುದಾದಲ್ಲಿ ಅನುಮತಿಸಬಹುದು ಎಂದರು. ಸದಸ್ಯರಾದ ಶ್ರೀ ಮುಸಾವೀರ್ ಬಾಷಾ, ಶ್ರೀ ಲಕ್ಷ್ಮಿಕಾಂತ ಚಿಮನೂರುರವರು ಕೂಡ ಇದಕ್ಕೆ ಧ್ವನಿಗೂಡಿಸಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಶ್ರೀಮತಿ ಶಕುಂತಲ ಕೆ.ಜಿ.ಎನ್., ಪ್ರಥಮ ದರ್ಜೆ ಸಹಾಯಕರು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕುವೆಂಪು ವಿಶ್ವವಿದ್ಯಾಲಯಕ್ಕೆ ಹುದ್ದೆ ರಹಿತವಾಗಿ ವರ್ಗಾವಣೆ ಹೊಂದಲು ನಿರಪೇಕ್ಷಣಾ ಪತ್ರ ನೀಡಲು ಸಭೆಯು ನಿರ್ಣಯಿಸಿತು.

**2025–ಸಿಂ–2.15:** ಶ್ರೀ ಹೇಮಂತ್ ಕುಮಾರ್ ಎನ್. ಪ್ರಥಮ ದರ್ಜೆ ಸಹಾಯಕರು, ಬಾಗಲಕೋಟೆ ವಿಶ್ವವಿದ್ಯಾಲಯ, ಜಮಖಂಡಿ ಇವರನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ಹುದ್ದೆ ಸಮೇತ ವರ್ಗಾಯಿಸುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಪ್ರಕರಣ 58(1)ರಲ್ಲಿ ಅಂತರ ವಿಶ್ವವಿದ್ಯಾಲಯ ವರ್ಗಾವಣೆಗೆ ಅವಕಾಶವನ್ನು ಕಲ್ಪಿಸಿರುವುದರಿಂದ ಶ್ರೀ ಹೇಮಂತ್ ಕುಮಾರ್ ಎನ್. ಪ್ರಥಮ ದರ್ಜೆ ಸಹಾಯಕರು ಇವರು ಬಾಗಲಕೋಟೆ ವಿಶ್ವವಿದ್ಯಾಲಯ, ಜಮಖಂಡಿ – ಇವರನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ಹುದ್ದೆ ಸಮೇತ ವರ್ಗಾವಣೆಗೆ ಅನುಮತಿಸಿದ ಸಭೆಯು, ಸರ್ಕಾರಕ್ಕೆ ನಿರಾಪೇಕ್ಷಣ ಪತ್ರ ನೀಡಲು ಸರ್ವಾನುಮತದಿಂತ ನಿರ್ಣಯಿಸಿತು.

**2025–ಸಿಂ–2.16:** ಥೈಲಾಂಡ್ ದೇಶಕ್ಕೆ ಹೋಗಿಬರಲು ಅನುಮತಿ ನೀಡುವ ಕುರಿತು.

**ನಿರ್ಣಯ:** ಶ್ರೀ ಬ್ರಹ್ಮಾನಂದ ರಾನಡೆ, ಹಿರಿಯ ಸಹಾಯಕರು, ಪ್ರಾಧಿಕಾರಗಳ ವಿಭಾಗ – ಇವರು ದಿನಾಂಕ:21–04–2025 ರಿಂದ 25–04–2025 ರವರೆಗೆ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಥೈಲಾಂಡ್ ದೇಶಕ್ಕೆ ಪ್ರವಾಸ ಹೋಗಿಬರಲು ಸಭೆಯು ಅನುಮತಿಸಿತು.

**2025–ಸಿಂ–2.16(ಎ):** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಕೆಳಕಂಡ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಖಾಯಂ ಅಧ್ಯಾಪಕರು ಇಲ್ಲವಾದ್ದರಿಂದ ಬೇರೆ ವಿಭಾಗಗಳ ಅಧ್ಯಾಪಕರನ್ನು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ನೂತನ ವಿಭಾಗಾಧ್ಯಕ್ಷರನ್ನು ನೇಮಕ ಮಾಡಿ ಆದೇಶ ಹೊರಡಿಸಲಾದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

| ಕ್ರ ಸಂ. | ಹೆಸರು | ಹುದ್ದೆ | ವಿಭಾಗ |
|---|---|---|---|
| 01 | ಡಾ. ಈ.ಚಂದ್ರಶೇಖರ್ | ಪ್ರಾಧ್ಯಾಪಕರು | ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ವಿಭಾಗ |
| 02 | ಡಾ. ದತ್ತಾತ್ರೇಯ ಎಂ. | ಸಹ ಪ್ರಾಧ್ಯಾಪಕರು | ಸ್ನಾತಕೋತ್ತರ ಹಿಂದಿ ಅಧ್ಯಯನ ವಿಭಾಗ |

**2025–ಸಿಂ–2.16(ಬಿ):** ಶಾಲಾ ಪರಿಕಲ್ಪನೆಯ ಶಾಲೆಗಳಿಗೆ ನಿರ್ದೇಶಕರನ್ನು ನೇಮಿಸುವ ಬಗ್ಗೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ನಿರ್ಣಯ: ವಿಶ್ವವಿದ್ಯಾಲಯದ ಶಾಲಾ ಪರಿಕಲ್ಪನೆಯ ಅಡಿಯಲ್ಲಿ ವಿವಿಧ ಸ್ಕೂಲ್‌ಗಳಿಗೆ ನಿರ್ದೇಶಕರನ್ನು ನೇಮಕಾತಿ ಮಾಡಲಾಗಿದ್ದು, ಸದರಿ ನಿರ್ದೇಶಕರುಗಳ ಅವಧಿಯು ಮುಕ್ತಾಯಗೊಂಡಿರುವುದರಿಂದ/ ಮುಂದೆ ಮುಕ್ತಾಯಗೊಳ್ಳಲಿರುವುದರಿಂದ ಆಯಾ ಶಾಲೆಗಳಿಗೆ ಈ ಕೆಳಕಂಡವರನ್ನು ನಿರ್ದೇಶಕರಾಗಿ ನೇಮಕ ಮಾಡಲು ಸಭೆಯು ಅನುಮತಿಸಿತು.

| ಕ್ರ. ಸಂ. | ಸ್ಕೂಲ್‌ನ ಹೆಸರು | ನೇಮಕಾತಿಗೆ ಶಿಫಾರಸ್ಸು ಮಾಡಲಾದ ಅಧ್ಯಾಪಕರ ವಿವರ |
|---|---|---|
| 01 | School of Social Sciences | ಪ್ರೊ. ಚಂದ್ರಶೇಖರ್ ಎಸ್.<br>ಸಮಾಜಶಾಸ್ತ್ರ ವಿಭಾಗ |
| 02 | School of Chemical Sciences | ಪ್ರೊ. ಜಿ.ಜೆ. ಸತೀಶ್<br>ಜೀವರಸಾಯನಶಾಸ್ತ್ರ ವಿಭಾಗ |
| 03 | School of Physical Sciences | ಪ್ರೊ. ಸುಧಾ<br>ಭೌತಶಾಸ್ತ್ರ ವಿಭಾಗ |
| 04 | School of Business Studies | ಪ್ರೊ.ಮಂಜುನಾಥ ಕೆ.ಆರ್.<br>ನಿರ್ವಹಣಾಶಾಸ್ತ್ರ (ಎಂ.ಬಿ.ಎ.,)ವಿಭಾಗ |
| 05 | School of Languages & Literature | ಪ್ರೊ. ಬಿ.ವಿ. ರಾಮಪ್ರಸಾದ್<br>ಇಂಗ್ಲಿಷ್ ವಿಭಾಗ |

**2025–ಸಿಂ–2.16(ಸಿ):** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ವಿಶ್ವವಿದ್ಯಾಲಯದ ಈ ಕೆಳಕಂಡ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿಭಾಗಾಧ್ಯಕ್ಷರ ಅವಧಿ ಮುಕ್ತಾಯಗೊಂಡಿರುವ/ಮುಂದೆ ಮುಕ್ತಾಯಗೊಳ್ಳಲಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ನೂತನ ವಿಭಾಗಾಧ್ಯಕ್ಷರ ನೇಮಕ ಮಾಡಲು ಸರ್ವಾನುಮತದಿಂದ ಅನುಮೋದಿಸಲಾಯಿತು.

| ಕ್ರ. ಸಂ. | ಹೆಸರು | ಹುದ್ದೆ | ವಿಭಾಗ |
|---|---|---|---|
| 01 | ಡಾ.ಗೋವಿಂದರಾಜು | ಪ್ರಾಧ್ಯಾಪಕರು | ಭೂವಿಜ್ಞಾನ |
| 02 | ಡಾ. ಬಿ.ಜೆ. ಗಿರೀಶ್ | ಪ್ರಾಧ್ಯಾಪಕರು | ಗಣಿತಶಾಸ್ತ್ರ |
| 03 | ಡಾ. ನೆಲ್ಲಿಕಟ್ಟೆ ಸಿದ್ದೇಶ್ | ಸಹ ಪ್ರಾಧ್ಯಾಪಕರು | ಕನ್ನಡಭಾರತಿ |
| 04 | ಡಾ. ಅಂಜನಪ್ಪ ಬಿ.ಹೆಚ್. | ಪ್ರಾಧ್ಯಾಪಕರು | ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ |
| 05 | ಡಾ.ಎ. ಷಣ್ಮುಖ | ಪ್ರಾಧ್ಯಾಪಕರು | ರಾಜ್ಯಶಾಸ್ತ್ರ |
| 06 | ಡಾ. ದೇವಿದಾಸ ಬಿ. ಗೈಬಣ್ಣ | ಪ್ರಾಧ್ಯಾಪಕರು | ಭೌತಶಾಸ್ತ್ರ |
| 07 | ಡಾ.ಬಿ.ಇ. ಕುಮಾರಸ್ವಾಮಿ | ಪ್ರಾಧ್ಯಾಪಕರು | ಔದ್ಯೋಗಿಕ ರಸಾಯನಶಾಸ್ತ್ರ |
| 08 | ಡಾ.ಕುಮಾರಸ್ವಾಮಿ ಹೆಚ್.ಎಂ. | ಸಹ ಪ್ರಾಧ್ಯಾಪಕರು | ಜೈವಿಕ ತಂತ್ರಜ್ಞಾನ |
| 09 | ಡಾ. ಎಸ್.ಎಸ್.ಪಾಟೀಲ್ | ಪ್ರಾಧ್ಯಾಪಕರು | ಶಿಕ್ಷಣಶಾಸ್ತ್ರ |
| 10 | ಡಾ. ಹಿರೇಮಣಿನಾಯ್ಕ ಆರ್. | ಪ್ರಾಧ್ಯಾಪಕರು | ಪ್ರವಾಸೋದ್ಯಮ |
| 11 | ಡಾ. ಯೋಗೇಂದ್ರ ಕೆ. | ಪ್ರಾಧ್ಯಾಪಕರು | ಪರಿಸರ ವಿಜ್ಞಾನ |

**2025–ಸಿಂ–2.16(ಡಿ):** ಆಸ್ಟ್ರೇಲಿಯಾ ದೇಶಕ್ಕೆ ಹೋಗಿಬರಲು ಅನುಮತಿ ನೀಡುವ ಕುರಿತು.

ನಿರ್ಣಯ: ಶ್ರೀಮತಿ ಗೀತಾ ಕೆ.ಆರ್., ಪ್ರಥಮ ದರ್ಜೆ ಸಹಾಯಕರು, ಪರೀಕ್ಷಾ ವಿಭಾಗ – ಇವರ ಮನವಿಯಂತೆ, ಸದರಿಯವರ ಮಗಳು Swinburne University, Melbourne, Victoria Austrelia ಇಲ್ಲಿ M.S. ಪದವಿ ಮುಗಿಸಿರುವುದರಿಂದ ದಿನಾಂಕ:30–04–2025 ರಂದು ನಡೆಯಲಿರುವ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಘಟಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ದಿನಾಂಕ:15–04–2025 ರಿಂದ 09–05–2025ರವರೆಗೆ ಆಸ್ಟ್ರೇಲಿಯಾ ದೇಶಕ್ಕೆ ತಮ್ಮ ಸ್ವಂತ ವೆಚ್ಚದಲ್ಲಿ ಹೋಗಿಬರಲು ಅನುಮತಿ ನೀಡಲು ಸಭೆಯು ನಿರ್ಣಯಿಸಿತು.

**2025–ಸಿಂ–2.16(ಇ):** ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ಇವರುಗಳ ಮನವಿಯ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳಾದ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್‌ಗಳು ಮನವಿ ಸಲ್ಲಿಸಿದ್ದು, ನಾವು ಸುಮಾರು 19 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಾ ಬಂದಿದ್ದೇವೆ. ನಮಗೆ ಈ ಹಿಂದೆ ಸಿಂಡಿಕೇಟ್ ನಿರ್ಣಯದಂತೆ, ನಮ್ಮ ಸೇವೆಯನ್ನು ತುರ್ತು ಸೇವೆ ಎಂದು ಪರಿಗಣಿಸಿ ಅಂದಿನ ವೇತನದ ಜೊತೆಗೆ 5000–00 ಹೆಚ್ಚುವರಿಯಾಗಿ ನೀಡಬೇಕೆಂದು ಆದೇಶಿಸಲಾಗಿತ್ತು. ಅದರಂತೆ 5000–00ರೂಗಳನ್ನು ನೀಡುತ್ತಿದ್ದರು. ಆದರೆ ಮೇ–2023 ರಿಂದ ರೂ.5000–00ಗಳನ್ನು ಪಾವತಿಸುವುದನ್ನು ತಡೆಹಿಡಿದಿದ್ದಾರೆ. ಹೊರಗುತ್ತಿಗೆಯಲ್ಲಿರುವ ಎಲ್ಲಾ ನೌಕರರಿಗೆ ವೇತನವನ್ನು ಎರಡು ಬಾರಿ ಹೆಚ್ಚಿಸಿರುತ್ತಾರೆ. ಆದರೆ, ನಮಗೆ ಯಾವುದೇ ವೇತನವನ್ನು ಹೆಚ್ಚಿಸಿರುವುದಿಲ್ಲ. ಆದುದರಿಂದ, ಸೇವೆಯನ್ನು ಪರಿಗಣಿಸಿ ನಮ್ಮ ಸಮಸ್ಯೆಯನ್ನು ಬಗೆಹರಿಸುವುದರೊಂದಿಗೆ, ನಮಗೆ ಸಂಚಿತ ವೇತನ ಅಥವಾ ವೈದ್ಯರಿಗೆ ಕೊಡುವ ಹಾಗೆ ಗೌರವ ಸಂಭಾವನೆಯಾಗಿ ರೂ.35000–00ಗಳನ್ನು ಪರಿವರ್ತಿಸಿ ಕೊಡುವಂತೆ ಮನವಿ ಸಲ್ಲಿಸಿದ್ದಾರೆ.

ಪರಿಶೀಲಿಸಲಾಗಿ, ದಿನಾಂಕ: 08–10–2020ರ ಸಿಂಡಿಕೇಟ್ ಸಭೆಯಲ್ಲಿ "ಈ ಸಿಬ್ಬಂದಿಗಳನ್ನು ಸಂಚಿತ ವೇತನ ಆಧಾರದ ಮೇಲೆ ನೇಮಕ ಮಾಡಲು ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು. ಸರ್ಕಾರದಿಂದ ಅನುಮೋದನೆ ಬಂದ ನಂತರ ಸಂಚಿತ ವೇತನ ಆಧಾರದ ಮೇಲೆ ನೇಮಕ ಮಾಡಿ ಆದೇಶ ನೀಡಲು ನಿರ್ಣಯಿಸಲಾಯಿತು ಹಾಗೂ ಸರ್ಕಾರವು ಅನುಮೋದನೆ ನೀಡುವವರೆಗೆ ಇವರುಗಳಿಗೆ ಈಗ ನೀಡುತ್ತಿರುವ ವೇತನಕ್ಕೆ ರೂ.5000–00ವನ್ನು ಹೆಚ್ಚಿಸಿ ನೀಡಲು ಅನುಮೋದಿಸಲಾಯಿತು" ಎಂದು ನಿರ್ಣಯಿಸಿರುತ್ತದೆ.

ಸಿಂಡಿಕೇಟ್ ನಿರ್ಣಯದ ಮೇರೆಗೆ, ಆರೋಗ್ಯ ಕೇಂದ್ರದಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರನ್ನು ಸಂಚಿತ ವೇತನ ಆಧಾರದ ಮೇಲೆ ಹಂಗಾಮಿಯಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ:12–02–2021ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸದರಿ, ಪ್ರಸ್ತಾವನೆಯ ಕುರಿತು ಸರ್ಕಾರದ ದಿನಾಂಕ:19–04–2021ರ ಪತ್ರದಲ್ಲಿ ವಿಶ್ವವಿದ್ಯಾನಿಲಯವು ಅನುಮೋದನೆ ಇಲ್ಲದ/ಸೃಜನೆಯಾಗದ ಹುದ್ದೆಗಳಿಗೆ ತನ್ನ ಹಂತದಲ್ಲಿಯೇ ನೇಮಕಾತಿ ಮಾಡಿಕೊಂಡಿದ್ದು, ಯಾವುದೇ ಪ್ರಕ್ರಿಯೆಗೆ ಸರ್ಕಾರದ ಪೂರ್ವಾನುಮತಿ ಪಡೆಯದೇ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಿದ್ದು, ಇದರಿಂದಾಗಿ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತದೆ ಆದ್ದರಿಂದ ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ನಂತರದಲ್ಲಿ ಕುವೆಂಪು ವಿಶ್ವವಿದ್ಯಾಲಯದ Draft Statute relating to the Creation of medical, Para Medical and Ministerial Posts in the University Health Centre ಪರಿನಿಯಮಾವಳಿಗೆ ಅನುಮೋದನೆಗಾಗಿ ದಿನಾಂಕ: 10–02–2023ರಂದು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಕುವೆಂಪು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ದಿನಾಂಕ:27–03–2023ರ ಪತ್ರದಲ್ಲಿ ತಿಳಿಸಿರುತ್ತಾರೆ.

ಮೇಲ್ಕಂಡ ಮಾಹಿತಿಗಳೊಂದಿಗೆ, ಆರೋಗ್ಯ ಕೇಂದ್ರದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ಗೌರವ ಸಂಭಾವನೆಯಾಗಿ ರೂ.35000–00ಗಳನ್ನು ಪಾವತಿಸುವ ಕುರಿತಾಗಿ ಕುಲಸಚಿವರು ಸಭೆಗೆ ವಿಷಯ ಮಂಡಿಸಿದರು. ಪ್ರೊ.ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ಸರ್ಕಾರದ ಹಂತದಲ್ಲಿ ಈ ಬಗ್ಗೆ ಈಗಾಗಲೇ ಪತ್ರ ವ್ಯವಹಾರವಾಗಿರುವುದರಿಂದ, ರಾಜ್ಯದ ಬೇರೆ ವಿಶ್ವವಿದ್ಯಾಲಯ ಹಾಗೂ ಸಂಸ್ಥೆಗಳಲ್ಲಿ ಆರೋಗ್ಯ



8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಕೇಂದ್ರದ ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ವೇತನದ ಕುರಿತಾಗಿ ಮಾಹಿತಿ ಪಡೆದು, ಮಾಹಿತಿಗಳು ಬಂದ ನಂತರ ಮುಂದಿನ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಬಹುದು ಎಂದರು.

ನಿರ್ಣಯ: ಚರ್ಚೆಯ ನಂತರ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ಗೌರವ ಸಂಭಾವನೆಯಾಗಿ ಪಾವತಿಸುವ ಕುರಿತಾಗಿ ರಾಜ್ಯದ ಬೇರೆ ವಿಶ್ವವಿದ್ಯಾಲಯ, ಇಲಾಖೆ ಹಾಗೂ ಸಂಸ್ಥೆಗಳಲ್ಲಿ ಆರೋಗ್ಯ ಕೇಂದ್ರದ ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ವೇತನದ ಕುರಿತಾಗಿ ಮಾಹಿತಿ ಪಡೆದು, ಮಾಹಿತಿಗಳು ಬಂದ ನಂತರ ಸಿಂಡಿಕೇಟ್ ಸಭೆಗೆ ಮಂಡಿಸುವುದು ಎಂದು ನಿರ್ಣಯಿಸಲಾಯಿತು.

2025–ಸಿಂ–2.16(ಎಫ್): ಶ್ರೀ ಬಿ.ಎಸ್. ರುದ್ರೇಶಪ್ಪ, ಕಿರಿಯ ಸಹಾಯಕರು – ಇವರಿಗೆ ತುಮಕೂರು ವಿಶ್ವವಿದ್ಯಾಲಯಕ್ಕೆ ನಿಯೋಜನೆ ಮೇಲೆ ತೆರಳಲು ಸದರಿಯವರ ಮನವಿಯ ಮೇರೆಗೆ ಅನುಮತಿಸುವ ಬಗ್ಗೆ.

ನಿರ್ಣಯ: ಕುವೆಂಪು ವಿಶ್ವವಿದ್ಯಾಲಯದಿಂದ ತುಮಕೂರು ವಿಶ್ವವಿದ್ಯಾಲಯಕ್ಕೆ ನಿಯೋಜನೆ ಮೇಲೆ ತೆರಳಿರುವ ಶ್ರೀ ರುದ್ರೇಶಪ್ಪ ಬಿ.ಎಸ್. ಕಿರಿಯ ಸಹಾಯಕರು – ಇವರ ನಿಯೋಜನಾ ಅವಧಿಯು ದಿನಾಂಕ: 29–03–2025ಕ್ಕೆ ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಸದರಿಯವರು ಅನಾರೋಗ್ಯದಿಂದ ಬಳಲುತ್ತಿರುವ ತನ್ನ ವೃದ್ಧ ತಾಯಿಯವರನ್ನು ನೋಡಿಕೊಳ್ಳುವ ಜವಾಬ್ದಾರಿಯು ನನ್ನ ಮೇಲಿರುವುದರಿಂದ ದಿನಾಂಕ:30–03–2025 ರಿಂದ ಮುಂದಿನ 02 ವರ್ಷಗಳವರೆಗೆ ನಿಯೋಜನೆ ಸೇವೆಯನ್ನು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಮುಂದುವರೆಸಲು ಅನುಮತಿ ನೀಡುವಂತೆ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ನಿಯೋಜನೆ ಮುಂದುವರೆಸಲು ಅನುಮತಿಸಲು ಸಭೆಯು ನಿರ್ಣಯಿಸಿತು.

2025–ಸಿಂ–2.16(ಜಿ): ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಾಪಕರುಗಳಿಗೆ ವಿವಿಧ ವೃಂದಕ್ಕೆ ವೃತ್ತಿ ಪದೋನ್ನತಿ ನೀಡುವ ಸಂಬಂಧ ದಿನಾಂಕ:27–02–2025, 04–03–2025 ರಿಂದ 06–03–2025 ರವರೆಗೆ ನಡೆದ ಬಿ.ಓ.ಎ. ನಡಾವಳಿಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಮತ್ತು ಘಟಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರಿಗೆ ವೃತ್ತಿಪದೋನ್ನತಿಗಾಗಿ 27ನೇ ಫೆಬ್ರವರಿ, 2025 ಹಾಗೂ 4, 5 ಮತ್ತು 6ನೇ ಮಾರ್ಚ್, 2025ರಂದು ನಡೆದ ಬಿ.ಓ.ಎ. ಮತ್ತು ಆಯ್ಕೆ ಸಮಿತಿ ಸಭೆಗಳ ನಡಾವಳಿಗಳನ್ನು ಸಭೆಯು ಈ ಕೆಳಗಿನಂತೆ ಅನುಮೋದಿಸಿತು.

| ಕ್ರ ಸಂ. | ಅಧ್ಯಾಪಕರ ಹೆಸರು ಮತ್ತು ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ/ ಷರಾ |
|---|---|---|---|---|
| 01 | ಪ್ರೊ. ಎ.ಎನ್.ರಾಜೇಶ್ವರ<br>ಜೀವರಸಾಯನಶಾಸ್ತ್ರ ವಿಭಾಗ | ಪ್ರಾಧ್ಯಾಪಕ | ಹಿರಿಯ ಪ್ರಾಧ್ಯಾಪಕ | 25–12–2023 |
| 02 | ಪ್ರೊ. ಜಿ.ಜೆ. ಸತೀಶ<br>ಜೀವರಸಾಯನಶಾಸ್ತ್ರ ವಿಭಾಗ | ಪ್ರಾಧ್ಯಾಪಕ | ಹಿರಿಯ ಪ್ರಾಧ್ಯಾಪಕ | Application deffered to complete eligibility requirement and adhere to recommendation of the expert committee |
| 03 | ಡಾ.ಪಿ. ನಿರಂಜನ,<br>ಜೀವರಸಾಯನಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 23–01–2025 |
| 04 | ಪ್ರೊ. ಸರ್ವಮಂಗಳ, ಜಿ.,<br>ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ | ಪ್ರಾಧ್ಯಾಪಕ | ಹಿರಿಯ ಪ್ರಾಧ್ಯಾಪಕ | 01–01–2024 |
| 05 | ಪ್ರೊ. ನಾಗರಾಜ<br>ಅನ್ವಯಿಕ ಪ್ರಾಣಿಶಾಸ್ತ್ರ | ಪ್ರಾಧ್ಯಾಪಕ | ಹಿರಿಯ ಪ್ರಾಧ್ಯಾಪಕ | 29–11–2023 |
| 06 | ಡಾ. ಕುಮಾರಸ್ವಾಮಿ, ಹೆಚ್.ಎಂ.,<br>ಜೈವಿಕ ತಂತ್ರಜ್ಞಾನ ವಿಭಾಗ | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 15–07–2024 |



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

| | | | | |
|---|---|---|---|---|
| 07 | ಪ್ರೊ. ಮಹದೇವನ್, ಕೆ.ಎಂ., ರಸಾಯನಶಾಸ್ತ್ರ ವಿಭಾಗ, ಕಡೂರು. | ಪ್ರಾಧ್ಯಾಪಕ | ಹಿರಿಯ ಪ್ರಾಧ್ಯಾಪಕ | 13-05-2023 |
| 08 | ಡಾ. ಬಸವರಾಜ ಎನ್. ಜಗದಾಳೆ, ಎಲೆಕ್ಟ್ರಾನಿಕ್ಸ್ ವಿಭಾಗ | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 27-07-2023 |
| 09 | ಪ್ರೊ. ಎಸ್.ಎಸ್. ಪಾಟೀಲ್, ಶಿಕ್ಷಣಶಾಸ್ತ್ರ ವಿಭಾಗ | ಪ್ರಾಧ್ಯಾಪಕ | ಹಿರಿಯ ಪ್ರಾಧ್ಯಾಪಕ | 17-09-2024 |
| 10 | ಡಾ. ಗಜಾನನಪ್ರಭು, ಬಿ., ದೈಹಿಕ ಶಿಕ್ಷಣ ಅಧ್ಯಯನ ವಿಭಾಗ | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 30-12-2023 |
| 11 | ಪ್ರೊ. ಶಿವಾನಂದ ಕೆಳಗಿನಮನಿ, ಕನ್ನಡಭಾರತಿ | ಪ್ರಾಧ್ಯಾಪಕ | ಹಿರಿಯ ಪ್ರಾಧ್ಯಾಪಕ | 15-07-2023 |
| 12 | ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್ ಕನ್ನಡಭಾರತಿ. | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 23-01-2025 |
| 13 | ಪ್ರೊ. ಬಿ.ವಿ. ರಾಮಪ್ರಸಾದ್ ಇಂಗ್ಲಿಷ್ ವಿಭಾಗ | ಪ್ರಾಧ್ಯಾಪಕ | ಹಿರಿಯ ಪ್ರಾಧ್ಯಾಪಕ | 04-03-2025 |
| 14 | ಪ್ರೊ. ಹೆಚ್.ಎನ್. ರಮೇಶ್ ನಿರ್ವಹಣಾಶಾಸ್ತ್ರ ವಿಭಾಗ | ಪ್ರಾಧ್ಯಾಪಕ | ಹಿರಿಯ ಪ್ರಾಧ್ಯಾಪಕ | 19-09-2024 |
| 15 | ಡಾ. ಯೋಗೀಶ್‌ನಾಯ್ಕ್ ಗಣಕವಿಜ್ಞಾನ ವಿಭಾಗ | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | Resolved to reprocess the application post approval of the Government to adopt Gazeete notification of UGC to provision 4th amendment of 2010 regulations. |

**ಘಟಕ ಕಾಲೇಜುಗಳ ಅಧ್ಯಾಪಕರು;**

| ಕ್ರ ಸಂ. | ಅಧ್ಯಾಪಕರ ಹೆಸರು ಮತ್ತು ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ/ ಷರಾ |
|---|---|---|---|---|
| 01 | ಡಾ. ಚಂದ್ರಶೇಖರ, ಬಿ.ಎಂ., ಇತಿಹಾಸ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, | ಸಹಾಯಕ ಪ್ರಾಧ್ಯಾಪಕ | ಸಹ ಪ್ರಾಧ್ಯಾಪಕ | 20-12-2024 |
| 02 | ಶ್ರೀ ಶಫಿಉಲ್ಲ ಇತಿಹಾಸ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, | ಸಹಾಯಕ ಪ್ರಾಧ್ಯಾಪಕ | ಸಹ ಪ್ರಾಧ್ಯಾಪಕ | 16-03-2024 |
| 03 | ಡಾ.ಕೆ.ಎಲ್.ನಾಯ್ಕ, ಪ್ರಾಣಿಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 15-04-2022 |
| 04 | ಡಾ.ಸಾಯೀಶ್ವರ, ಹೆಚ್.ಎ., ಪ್ರಾಣಿಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹಾಯಕ ಪ್ರಾಧ್ಯಾಪಕ | ಸಹ ಪ್ರಾಧ್ಯಾಪಕ | Resolved to reprocess the application post approval of the Government to adopt Gazeete notification of UGC to provision 4th amendment of 2010 regulations. |
| 05 | ಶ್ರೀಮತಿ ಶಾಂತ, ಎ.ಆರ್., ಪ್ರಾಣಿಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹಾಯಕ ಪ್ರಾಧ್ಯಾಪಕ | ಸಹ ಪ್ರಾಧ್ಯಾಪಕ | Resolved to reprocess the application post approval of the Government to adopt Gazeete notification of UGC to provision 4th amendment of 2010 regulations. |
| 06 | ಡಾ. ಬಿ.ಟಿ. ಪ್ರಭಾಕರ, ಜೈವಿಕ ತಂತ್ರಜ್ಞಾನ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 15-07-2024 |

| | | | | |
|---|---|---|---|---|
| 07 | ಡಾ. ಅರುಣಕುಮಾರ್, ರಸಾಯನಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ. | ಸಹಾಯಕ ಪ್ರಾಧ್ಯಾಪಕ ಹಂತ 11 | ಸಹಾಯಕ ಪ್ರಾಧ್ಯಾಪಕ ಹಂತ 12 | 28-10-2021 |
| 08 | ಡಾ. ಎಸ್.ಎ. ಶ್ರೀಕಂಠ ರಸಾಯನಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 31-01-2023 |
| 09 | ಡಾ. ಮೋಹನೇಶ, ಕೆ.ಎಂ., ಎಲೆಕ್ಟ್ರಾನಿಕ್ಸ್ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹಾಯಕ ಪ್ರಾಧ್ಯಾಪಕ | ಸಹ ಪ್ರಾಧ್ಯಾಪಕ | Resolved to reprocess the application post approval of the Government to adopt Gazeete notification of UGC to provision 4th amendment of 2010 regulations. |
| 10 | ಡಾ. ನಾಗರಾಜ, ಎನ್., ಭೌತಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 21-10-2023 |
| 11 | ಡಾ. ನಫೀಜಾ ಬೇಗಂ, ಸಸ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 22-06-2023 |
| 12 | ಡಾ.ಕೃಷ್ಣಸ್ವಾಮಿ, ಕೆ., ಸಸ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 03-08-2018 |
| 13 | ಡಾ.ಹೆಚ್.ಎಂ. ನಾಗಾರ್ಜುನ, ಕನ್ನಡ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 24-01-2025 |
| 14 | ಡಾ.ಎಸ್.ಎಂ. ಮುತ್ತಯ್ಯ ಕನ್ನಡ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 24-01-2025 |
| 15 | ಡಾ. ಹೆಚ್.ಎಸ್. ಮೋಹನ, ಕನ್ನಡ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 23-01-2025 |
| 16 | ಡಾ.ಇಬ್ರಾಹಿಂ ಖಲೀಲುಲ್ಲಾ ಇಂಗ್ಲಿಷ್ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು | ಸಹಾಯಕ ಪ್ರಾಧ್ಯಾಪಕ<br>ದಿನಾಂಕ ಪರಿಷ್ಕರಣೆ | ಸಹ ಪ್ರಾಧ್ಯಾಪಕ | 23-01-2022 |
| 17 | ಶ್ರೀ ರಂಗರಾಜ, ಕೆ., ರಾಜ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು | ಸಹಾಯಕ ಪ್ರಾಧ್ಯಾಪಕರ | ಸಹ ಪ್ರಾಧ್ಯಾಪಕ | Resolved to reprocess the application post approval of the Government to adopt Gazeete notification of UGC to provision 4th amendment of 2010 regulations. |
| 18 | ಡಾ.ಮಮತಾ, ಎಸ್.ಎಂ., ವಾಣಿಜ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 16-09-2023 |
| 19 | ಡಾ. ಶೋಭಾರಾಣಿ, ಹೆಚ್., ವಾಣಿಜ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 15-09-2023 |
| 20 | ಡಾ. ಗಿರಿಧರ, ಕೆ.ವಿ., ವಾಣಿಜ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 23-01-2025 |
| 21 | ಶ್ರೀ ಬಾಲಸ್ವಾಮಿ, ವಾಣಿಜ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು | ಸಹಾಯಕ ಪ್ರಾಧ್ಯಾಪಕ ಹಂತ 11 | ಸಹಾಯಕ ಪ್ರಾಧ್ಯಾಪಕ ಹಂತ 12 | 01-03-2024 |



8/4/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

| | | | | |
|---|---|---|---|---|
| 22 | ಶ್ರೀ ಶಶಿರಾಜ್, ಯು., ಪ್ರವಾಸೋದ್ಯಮ ವಿಭಾಗ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು | ಸಹಾಯಕ ಪ್ರಾಧ್ಯಾಪಕ ಹಂತ 11 | ಸಹಾಯಕ ಪ್ರಾಧ್ಯಾಪಕ ಹಂತ 12 | 23-01-2021 |

025–ಸಿಂ–2.16(ಹೆಚ್): 2025–26ನೇ ಸಾಲಿನಲ್ಲಿ ವಯೋ ನಿವೃತ್ತಿ ಹೊಂದಲು ಅನುಮತಿ ನೀಡುವ ಕುರಿತು.

ನಿರ್ಣಯ: ಶ್ರೀ ಟಿ.ಎಂ. ಬಸವರಾಜು, ಜವಾನ ಮತ್ತು ಕಾವಲುಗಾರರು, ಶ್ರೀಮದ್‌ರಂಭಾಪುರಿ ಪ್ರಥಮ ದರ್ಜೆ ಕಾಲೇಜು, ಶಂಕರಘಟ್ಟ ಇವರು 2025–26ನೇ ಸಾಲಿನಲ್ಲಿ ದಿನಾಂಕ:31-01-2026ರಂದು ವಯೋನಿವೃತ್ತಿ ಹೊಂದಲು ಅನುಮತಿ ನೀಡಲು ಸಭೆಯು ನಿರ್ಣಯಿಸಿತು.

025–ಸಿಂ–2.16(ಐ): ಡಾ. ಅನುರಾಧಪಟೇಲ್, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ವಿಭಾಗ ಇವರು ಸ್ವಯಂ ನಿವೃತ್ತಿ ಕುರಿತು.

ಕುಲಸಚಿವರು ಮಾತನಾಡಿ, ಡಾ. ಅನುರಾಧ ಪಟೇಲ್, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ವಿಭಾಗ,. ಇವರು ವೈದ್ಯಕೀಯ ಕಾರಣಗಳಿಂದಾಗಿ ದಿನಾಂಕ: 01–04–2025ರಿಂದ ಅನ್ವಯವಾಗುವಂತೆ ಸ್ವಯಂ ನಿವೃತ್ತಿ ನೀಡುವಂತೆ ಕೋರಿ ಮನವಿ ಸಲ್ಲಿಸಿದ್ದಾರೆ. ಪರಿಶೀಲಿಸಲಾಗಿ, ಸದರಿಯವರು ವಿಶ್ವವಿದ್ಯಾಲಯದಿಂದ ನಿಯೋಜನೆ ಮೇಲೆ ತೆರಳಿ ಕರ್ನಾಟಕ ರಾಜ್ಯ ಸರ್ಕಾರದ ನಿಗಮಗಳಾದ ದೇವರಾಜ ಅರಸ್ ಅಭಿವೃದ್ಧಿ ನಿಗಮ ಬೆಂಗಳೂರು ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಕೇಂದ್ರ, ಬೆಂಗಳೂರು, ಇಲ್ಲಿ ದಿನಾಂಕ:31–03–2013 ರಿಂದ 30–06–2024ರವರೆಗೆ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿ ದಿನಾಂಕ:30–06–2024 ರಂದು ಬಿಡುಗಡೆ ಹೊಂದಿ ವಿಶ್ವವಿದ್ಯಾಲಯದಲ್ಲಿ ದಿನಾಂಕ:01–07–2024ಕ್ಕೆ ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಇವರು ನಂತರ ದಿನಾಂಕ:02–07–2024 ರಿಂದ 31–12–2024ರವರೆಗೆ ವೈದ್ಯಕೀಯ ಆಧಾರದ ಮೇಲೆ ಗಳಿಕೆ/ಪರಿವರ್ತಿತ ರಜೆಯನ್ನು ಮಂಜೂರು ಮಾಡುವಂತೆ ಕೋರಿದ್ದು, ಒಟ್ಟು 183 ದಿನಗಳಿಗೆ ಗಳಿಕೆ/ಪರಿವರ್ತಿತ ರಜೆಯನ್ನು ಮಂಜೂರು ಮಾಡಲಾಗಿದೆ.

ಸದರಿ ಪ್ರಾಧ್ಯಾಪಕರು ನಂತರ ಪುನಃ ಮನವಿಯನ್ನು ಸಲ್ಲಿಸಿ ದಿನಾಂಕ:01–01–2025 ರಿಂದ 31–03–2025ರವರೆಗೆ ವೈದ್ಯಕೀಯ ಆಧಾರದ ಮೇಲೆ ಗಳಿಕೆ ರಜೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಆದರೆ, ಕೆಸಿಎಸ್ ನಿಯಮ 114 (4)(ಸಿ)ರನ್ವಯ ಗಳಿಕೆ ಹಾಗೂ ಪರಿವರ್ತಿತ ರಜೆಯನ್ನು ಸಂಯೋಜಿಸಿ 180 ದಿನಗಳು ಗರಿಷ್ಠಾವಧಿಗೆ ಮಂಜೂರು ಮಾಡಿರುವುದರಿಂದ ಮುಂದುವರೆಸಿದ ಅವಧಿಗೆ ರಜೆಯನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸಿ, ದಿನಾಂಕ:05-02-2025ರ ಪತ್ರದಲ್ಲಿ ಸದರಿ ಪ್ರಾಧ್ಯಾಪಕರಿಗೆ ಕೂಡಲೇ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ಪತ್ರಿಸಲಾಗಿದೆ. ಆದರೆ ಸದರಿ ಅಧ್ಯಾಪಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ.

ಕೆ.ಸಿ.ಎಸ್.ಆರ್. ನಿಯಮ 162ರಲ್ಲಿ ತನ್ನ ರಜೆ ಮುಗಿದ ಮೇಲೂ ಗೈರುಹಾಜರಾಗಿ ಉಳಿಯುವ ಸರ್ಕಾರಿ ನೌಕರನು ಅಂಥ ಗೈರುಹಾಜರಿ ಅವಧಿಗಾಗಿ ರಜಾ ಸಂಬಳವನ್ನು ಪಡೆಯಲು ಹಕ್ಕುಳ್ಳವನಾಗಿರುವುದಿಲ್ಲ ಮತ್ತು ಆ ಅವಧಿಯನ್ನು ರಜೆಯ ಸಕ್ಷಮ ಅಧಿಕಾರಿಯಿಂದ ವಿಸ್ತರಿಸಲ್ಪಟ್ಟಿದ್ದ ಹೊರತು, ಗಳಿಸಬಹುದಾದ ಮಟ್ಟಿಗೆ ಅರ್ಧವೇತನ ರಜೆಯೆಂಬಂತೆಯೂ ಅಂಥ ಗೈರುಹಾಜರಿ ಅವಧಿಗೆ ಅರ್ಧವೇತನ ರಜೆಯ ಅವಧಿಯು ಕಡಿಮೆ ಬೀಳುವ ಮಟ್ಟಿಗೆ ಅಸಾಧಾರಣ ರಜೆಯೆಂಬಂತೆಯೂ, ಅವನ ರಜಾ ಲೆಕ್ಕದಿಂದ ಕಳೆಯಲ್ಪಡತಕ್ಕದ್ದು, ರಜೆಯನ್ನು ಮಂಜೂರು ಮಾಡಲು ಸಕ್ಷಮ ಅಧಿಕಾರಿಗೆ ಮನವರಿಕೆಯಾಗುವಂತೆ ಅವನು ತನ್ನ ಹತೋಟಿ ಮೀರಿದ ಕಾರಣದಿಂದಾಗಿ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗಲಿಲ್ಲವೆಂಬುದನ್ನು ಸಿದ್ಧಪಡಿಸಿದಲ್ಲದೆ ರಜೆ ಮುಗಿದ ಬಳಿಕವೂ ಕರ್ತವ್ಯಕ್ಕೆ ಗೈರುಹಾಜರಾಗಿರುವುದು ಸರ್ಕಾರಿ ನೌಕರನು ದುರ್ನಡತೆಯ ಶಿಸ್ತಿನ ಕ್ರಮಕ್ಕೆ ಗುರಿಯಾಗುವನು ಎಂಬುದಾಗಿರುತ್ತದೆ.

8/4/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಅಲ್ಲದೇ 114(5)ರಲ್ಲಿ ಪರಿವರ್ತಿತ ರಜೆ ಮಂಜೂರಾದ ಸರ್ಕಾರಿ ನೌಕರನು ಸೇವೆಗೆ ರಾಜೀನಾಮೆ ಕೊಟ್ಟರೆ ಅಥವಾ ನಿವೃತ್ತನಾಗಲು ಸ್ವಯಂ ಇಚ್ಛೆ ಕೋರಿದ್ದು, ಅವನಿಗೆ ಅನುಮತಿ ನೀಡಿದರೆ ಪರಿವರ್ತಿತ ರಜೆಯನ್ನು ಅರ್ಧವೇತನ ರಜೆಯೆಂದು ಪರಿಗಣಿಸತಕ್ಕದ್ದು ಮತ್ತು ಪರಿವರ್ತಿತ ರಜೆ ಹಾಗೂ ಅರ್ಧವೇತನ ರಜೆ ಇವುಗಳಿಗೆ ಸಂಬಂಧಪಟ್ಟ ರಜಾ ಸಂಬಳದ ವ್ಯತ್ಯಾಸವನ್ನು ವಸೂಲು ಮಾಡತಕ್ಕದ್ದು ಎಂಬುದಾಗಿರುತ್ತದೆ ಎಂದು ನಿಯಮಗಳಿರುವುದನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಚರ್ಚೆಯ ನಂತರ, ಡಾ. ಅನುರಾಧಪಟೇಲ್, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ವಿಭಾಗ ಇವರು ದಿನಾಂಕ:01-04-2025ರಿಂದ ಅನ್ವಯವಾಗುವಂತೆ ಕೆ.ಸಿ.ಎಸ್.ಆರ್. ನಿಯಮದನ್ವಯ ಸ್ವಯಂ ನಿವೃತ್ತಿ ಪಡೆಯಲು ಅನುಮತಿ ನೀಡಲು ಮತ್ತು ಅವರ ರಜೆಗಳು ಮತ್ತು ಆ ಸಂದರ್ಭದ ವೇತನದ ಬಗ್ಗೆ ನಿಯಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಿತು.

**2025–ಸಿಂ–2.16(ಜೆ):** ಕುವೆಂಪು ವಿಶ್ವವಿದ್ಯಾಲಯದಲ್ಲಿ ಹಂಗಾಮಿಯಾಗಿ ಸೇವೆ ಸಲ್ಲಿಸಿ ವಿಲಿನೀಕರಣಗೊಂಡ ಅಧ್ಯಾಪಕೇತರ ನೌಕರರುಗಳಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಹಂಗಾಮಿಯಾಗಿ 10 ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಸೇವೆ ಸಲ್ಲಿಸಿರುವ ಅಧ್ಯಾಪಕೇತರ ನೌಕರರು ಮನವಿ ಸಲ್ಲಿಸಿ, ದಿನಾಂಕ:10–04–2006ರ ಮಾನ್ಯ ಸರ್ವೋಚ್ಛ ನ್ಯಾಯಾಲಯದ (ಉಮಾದೇವಿ v/s ಕಾರ್ಯದರ್ಶಿ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಇತರರು) ತೀರ್ಪಿನ ಪ್ರಕಾರ ಸೇವಾ ಸೌಲಭ್ಯಗಳನ್ನು ನೀಡುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಸರ್ವೋಚ್ಛ ನ್ಯಾಯಾಲಯದ (ಉಮಾದೇವಿ v/s ಕಾರ್ಯದರ್ಶಿ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಇತರರು) ತೀರ್ಪಿನ ಪ್ರಕಾರ

a) ಅಧ್ಯಾಪಕೇತರ ನೌಕರರು ಹಂಗಾಮಿಯಾಗಿ ಸೇವೆಯನ್ನು ಪ್ರಾರಂಭಿಸಿದ ದಿನಾಂಕದಿಂದಲೇ ಅವರ ಸೇವೆಯನ್ನು (ಸೇವಾವಧಿ ಎಂದು) ಪರಿಗಣಿಸಿ ನೇರ ನೇಮಕಾತಿಯಾಗುವ ನೌಕರರುಗಳಿಗೆ ಲಭ್ಯವಾಗುವ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ.

b) ದಿನಾಂಕ:10/04/2006ರ ಪೂರ್ವದಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿರುವ ಎಲ್ಲಾ ನೌಕರರುಗಳಿಗೆ ಹಾಗೂ ಆದೇಶದ ದಿನಾಂಕದಿಂದ ಮುಂದಿನ 06 ತಿಂಗಳ ಅವಧಿಗೆ 10 ವರ್ಷ ಸೇವೆ ಪೂರೈಸುವ ಎಲ್ಲಾ ಹಂಗಾಮಿ ನೌಕರರುಗಳಿಗೆ ಖಾಯಂಗೊಳಿಸಿ ಅವರುಗಳಿಗೆ ನೇರ ನೇಮಕಾತಿಗೊಳ್ಳುವ ನೌಕರರುಗಳಿಗೆ ನಿಯಮಾನುಸಾರವಾಗಿ ಲಭ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ.

c) ಸೇವೆಗೆ ವಿಲೀನಗೊಳ್ಳುವ ದಿನಾಂಕವನ್ನು ಎಲ್ಲಾ ಆರ್ಥಿಕ ಸೌಲಭ್ಯಗಳಿಗೆ ನೌಕರರು ಅರ್ಹಗೊಳ್ಳುವುದು ಹಾಗೂ ಸೇವಾವಧಿ ನಿರ್ಣಯಿಸುವ ಸಂದರ್ಭದಲ್ಲಿ ನೌಕರರು ಹಂಗಾಮಿ ಸೇವೆಗೆ ಸೇರಿದ ದಿನಾಂಕದಿಂದಲೇ ನೌಕರರ ಸೇವೆ ನಿರ್ಧರಿಸತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ. ಮುಂದುವರೆದು, ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ ಸುತ್ತೋಲೆ **ಸಂಖ್ಯೆ:ಸಿಆಸುಇ25ಸೇಸ್ಥಆ2003 ಬೆಂಗಳೂರು, ದಿನಾಂಕ:25/05/2006**ರಲ್ಲಿ ಸರ್ವೋಚ್ಛ ನ್ಯಾಯಾಲಯದ ಸಂವಿಧಾನ ಪೀಠದ ತೀರ್ಪು ದಿನಾಂಕ:10/04/2006ರಲ್ಲಿ "It is clear that adherence to the rule of equality in public employment is a basic feature of our Constitution and since the rule of law is the core of our Constitution, a Court would certainly be disabled from passing an order upholding a violation of Article 14 or in ordering the overlooking of the need to comply with the requirements of Article 14 read with Article 16 of the Constitution. Therefore, consistent with the scheme for public employment, this Court while laying down the law, has necessarily to hold that unless the appointment is in terms of the relevant rules and after a proper competition among qualified persons, the same would not confer any right on the appointee. If it is a contractual appointment, the appointment comes to an end at the end of the contract, if it were an engagement or appointment on daily wages or casual basis, the same would come to an end



8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

when it is discontinued. Similarly, a temporary employee could not claim to be made permanent on the expiry of his term of appointment. It has also to be clarified that merely because a temporary employee or a casual wage worker is continued for a time beyond the term of his appointment, he would not be entitled to be absorbed in regular service or made permanent, merely on the strength of such continuance, if the original appointment was not made by following a due process of selection as envisaged by the relevant rules............Merely because, an employee had continued under cover of an order of Court, which we have described as litigious employment in the earlier part of the judgment, he would not be entitled to any right to be adsorbed or made permanent in the service. ಎಂದಿರುತ್ತದೆ.

ಈ ಮಾನದಂಡದ ಹಿನ್ನಲೆಯಲ್ಲಿ ದಿನಾಂಕ:01/07/1984ರ ನಂತರದಲ್ಲಿ ದಿನಗೂಲಿ/ಹಂಗಾಮಿ ಸೇವೆ ಸೇರಿದ ನೌಕರರುಗಳಿಗೆ ದಿನಾಂಕ:10/04/2006ರ ಪೂರ್ವದಲ್ಲಿ ವೀಲಿನಿಕರಣಗೊಳಿಸಿದ ಕ್ರಮವನ್ನು ಸಕ್ರಮಗೊಳಿಸಬೇಕೆಂದು ಸರ್ವೋಚ್ಚ ನ್ಯಾಯಾಲಯದ ಆದೇಶದ ದಿನಾಂಕದಿಂದ 06 ತಿಂಗಳೊಳಗೆ ವೀಲಿನಿಕರಣಗೊಳಿಸಿ ಆದೇಶ ಹೊರಡಿಸಬೇಕೆಂದು ಆದೇಶಿಸಿರುತ್ತದೆ.

ಮೇಲಿನ ಅಂಶಗಳಿಗೆ ಮುಂದುವರೆದು ದಿನಾಂಕ:27/10/2024ರ ಸ್ನೇಹಲ್ ಸುಧಾಕರ್ ಲೋಖಂಡೆ(ಐ.ಎ.ಎಸ್.)ಸಮಿತಿಯ **"ಜೇಷ್ಠತಾ ಪಟ್ಟಿ ಪರಿಶೀಲನಾ ಸಮಿತಿ"**ಯ ನಡಾವಳಿಯಲ್ಲಿ ಕ್ರ.ಸಂ.07ರಲ್ಲಿ ವಿಶ್ವವಿದ್ಯಾಲಯದಲ್ಲಿ ಹಂಗಾಮಿ ನೌಕರರಾಗಿ ಸೇವೆಗೆ ಸೇರಿ ವಿಲಿನೀಕರಣಗೊಂಡ ಸಂದರ್ಭದಲ್ಲಿ 10 ವರ್ಷ ಪೂರೈಸಿದ ನೌಕರರುಗಳಿಗೆ (ಮಾನ್ಯ ಸರ್ವೋಚ್ಚ ನ್ಯಾಯಾಲಯ ದಿನಾಂಕ:10/04/2006ರ ತೀರ್ಪಿನನ್ವಯ) ನಿವೃತ್ತಿ ಸೌಲಭ್ಯ ನಿರ್ಣಯಿಸುವ ಸಂದರ್ಭದಲ್ಲಿ ಸದರಿ ನೌಕರರುಗಳ ಸೇವಾವಧಿಯನ್ನು ಅವರು ಹಂಗಾಮಿ ಸೇವೆಗೆ ಸೇರಿದ ದಿನಾಂಕದಿಂದಲೇ ಪರಿಗಣಿಸುವುದು ಮತ್ತು ಇತರೆ ಎಲ್ಲಾ ಆರ್ಥಿಕ ಸೌಲಭ್ಯಗಳಿಗೆ ಅವರು ವಿಲಿನೀಕರಣಗೊಂಡ ದಿನಾಂಕವನ್ನು ಪರಿಗಣಿಸುವುದು ಎಂದು ನಿರ್ಣಯಿಸಿರುತ್ತದೆ.

ಹಿಂದಿನ ಕುಲಸಚಿವರಾಗಿದ್ದ, ಶ್ರೀ ಸ್ನೇಹಲ್ ಸುಧಾಕರ್ ಲೋಖಂಡೆ, ಐ.ಎ.ಎಸ್., ಸಮಿತಿ ನಡಾವಳಿಯನ್ನು ದಿನಾಂಕ:28/02/2024ರ ಸಿಂಡಿಕೇಟ್ ಸಾಮಾನ್ಯ ಸಭೆ ಅನುಮೋದನೆ ನೀಡಿರುತ್ತದೆ.

**MAHARASTRA ADMINISTRATIVE TRIBUNAL MUMBAI BENCH AT AURANGABAD:** Arjun s/o Nivrutti Pache v/s State of Maharastra ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪುಟ ಸಂಖ್ಯೆ:14,15,16,17,18,20,21ರಲ್ಲಿನ ಬೇರೆ ಪ್ರಕರಣಗಳನ್ನು ಪರಿಗಣಿಸಿ ತನ್ನ ಅಂತಿಮ ತೀರ್ಪಿನಲ್ಲಿ Peon in Class IV Categoryಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಸಿಬ್ಬಂದಿಗಳಿಗೆ ಖಾಯಂ ಗೊಳಿಸಿ ಅವರು ಸೇವೆಗೆ ಸೇರಿದ ದಿನಾಂಕದಿಂದಲೆ ಅವರುಗಳಿಗೆ ಎಲ್ಲಾ ಸೇವಾ/ಆರ್ಥಿಕ ಸೌಲಭ್ಯಗಳನ್ನು ಆದೇಶ ದಿನಾಂಕದಿಂದ(26/08/2022)ರ ಅನ್ವಯವಾಗುವಂತೆ ಕ್ರಮ ಜರುಗಿಸಬೇಕೆಂದು ಆದೇಶಿಸಿರುತ್ತದೆ.

**MAHARASTRA ADMINISTRATIVE TRIBUNAL MUMBAI BENCH AT AURANGABAD: Dr. Kanchan d/o Tulshiram Bhorge v/s The state of Maharstra**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ MAT Mumbai ತನ್ನ ಅಂತಿಮ ತೀರ್ಪಿನಲ್ಲಿ, Medical Officer Group A(class–II)ಇವರಿಗೆ ಅವರ ಸೇವೆಗೆ ಸೇರಿದ ಮೂಲ ದಿನಾಂಕದಿಂದಲೆ ಎಲ್ಲಾ ಸೇವಾ/ಆರ್ಥಿಕ ಸೌಲಭ್ಯಗಳನ್ನು (ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸ್ಥಾಪಿತವಾಗಿರುವ ಮಾನದಂಡಗಳಂತೆಯೇ) ಒದಗಿಸುವುದು ಎಂದು ನಿರ್ದೇಶಿಸಿರುತ್ತದೆ.

ಈ ಎಲ್ಲಾ ಸರ್ಕಾರಿ ಆದೇಶಗಳು, ಸರ್ಕಾರದ ಅಧಿಕೃತ ಪತ್ರ ಸಂವಹನೆ, ಮಾನ್ಯ ಉಚ್ಚನ್ಯಾಯಾಲಯ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಹಿನ್ನೆಲೆ, ಮಾನ್ಯ ಕುಲಸಚಿವರು(ಸ್ನೇಹಲ್ ಲೊಕಂಡೆ(ಐ.ಎ.ಎಸ್.) ಇವರ ಸಮಿತಿ ನಿರ್ಣಯಿಸಿರುವಂತೆ ವಿಶ್ವವಿದ್ಯಾಲಯದಲ್ಲಿ ವಿಲಿನೀಕರಣಗೊಂಡಿರುವ ನೌಕರರುಗಳಿಗೆ ಅವರು ವಿಲಿನೀಕರಣ ಪೂರ್ವದಲ್ಲಿನ ಕನಿಷ್ಠ 10 ವರ್ಷ ಸೇವೆ ಪೂರೈಸಿರುವ ಹಿನ್ನೆಲೆಯಲ್ಲಿ ಅವರುಗಳ ನಿವೃತ್ತಿ ಸೌಲಭ್ಯ ನಿರ್ಣಯಿಸುವ ಸಂದರ್ಭದಲ್ಲಿ ಅವರು ವಿಶ್ವವಿದ್ಯಾಲಯದಲ್ಲಿ ಸೇವೆಗೆ ಸೇರಿದ ದಿನಾಂಕದಿಂದಲೇ ಅವರ ಸೇವಾವಧಿ ನಿರ್ಣಯಿಸಲು ಕುಲಸಚಿವರು ಸಭೆಗೆ ಮಂಡಿಸಿದರು. ಮುಂದುವರಿದು ಮಾತನಾಡಿದ ಕುಲಸಚಿವರು,



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಇದರ ವಿಚಾರವಾಗಿ ಸೇವಾ ಪರಿಣಿತರ ಅಭಿಪ್ರಾಯ ಪಡೆಯಲಾಗಿದೆ. ಅವರು 10 ವರ್ಷಗಳಿಗಿಂತ ಕಡಿಮೆ ಅಂದರೆ, 9 ವರ್ಷ 11 ತಿಂಗಳುಗಳ 29 ದಿನಗಳ ಕಾಲ ಸೇವೆ ಸಲ್ಲಿಸಿದ್ದರೂ ಕೂಡ ಅಂತಹ ನೌಕರರಿಗೆ ಈ ಸೌಲಭ್ಯ ದೊರೆಯುವುದಿಲ್ಲ ಎಂದರು.

ಸದಸ್ಯರಾದ, ಡಾ. ಜಿ. ಮಧು, ಶ್ರೀ ಜಿ.ಎಸ್.ಶಾಂತಕುಮಾರ್, ಲಕ್ಷ್ಮೀಕಾಂತ ಚಿಮ್ಮನೂರು, ಶ್ರೀಮತಿ ಸಾಕಮ್ಮ, ಶ್ರೀ ಹೆಚ್.ಜಿ. ಅರವಿಂದ ಮತ್ತು ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಇದರಿಂದಾಗಿ 10 ವರ್ಷಗಳಿಗಿಂತ ಕಡಿಮೆ ಅವಧಿಯ ಸೇವೆ ಸಲ್ಲಿಸಿದ ನೌಕರರಿಗೆ ಅನ್ಯಾಯವಾಗುತ್ತದೆ. ಅವರಲ್ಲಿ ಕೂಡ ಬಹಳಷ್ಟು ನೌಕರರು ನಿವೃತ್ತಿಯ ಅಂಚಿನಲ್ಲಿದ್ದು, ಹಂಗಾಮಿ ಸೇವೆ ಪರಿಗಣಿಸದಿದ್ದಲ್ಲಿ, ಅವರಿಗೆ ನಿವೃತ್ತಿ ವೇತನ ಬಹಳ ಕಡಿಮೆ ಬರುತ್ತದೆ. ಇದರಿಂದ, ಅವರ ನಿವೃತ್ತಿ ಜೀವನ ಬಹಳ ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಪರಿಶೀಲಿಸಿ ಪರಿಗಣಿಸುವಂತೆ ಕೋರಿದರು. ಕುಲಸಚಿವರು ಮಾತನಾಡಿ ಈ ಬಗ್ಗೆ ಮತ್ತೊಮ್ಮೆ ಪರಿಶೀಲಿಸಲಾಗುವುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದಲ್ಲಿ ಹಂಗಾಮಿಯಾಗಿ 10 ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಸೇವೆ ಸಲ್ಲಿಸಿರುವ ಅಧ್ಯಾಪಕೇತರ ನೌಕರರಿಗೆ ದಿನಾಂಕ:10-04-2006ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ (ಉಮಾದೇವಿ v/s ಕಾರ್ಯದರ್ಶಿ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಇತರರು) ತೀರ್ಪಿನ ಪ್ರಕಾರ ಲಭ್ಯವಿರುವ ಸೇವಾ ಸೌಲಭ್ಯಗಳನ್ನು ನೀಡಲು ನಿರ್ಣಯಿಸಿದ ಸಭೆಯು 10 ವರ್ಷಗಳಿಗಿಂತ ಕಡಿಮೆ ಅವಧಿಯ ಸೇವೆ ಸಲ್ಲಿಸಿರುವ ನೌಕರರಿಗೆ ಕೂಡ ನಿವೃತ್ತಿ ವೇತನದ ಸೌಲಭ್ಯಗಳನ್ನು ನೀಡುವ ಬಗ್ಗೆ ಮತ್ತೊಮ್ಮೆ ಪುನರ್ ಪರಿಶೀಲಿಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

**2025-ಸಿಂ-2.16(ಕೆ):** ವಿಶ್ವವಿದ್ಯಾಲಯದ ಸ್ನಾತಕ / ಸ್ನಾತಕೋತ್ತರ ವಿಭಾಗಗಳಲ್ಲಿರುವ ಅಧ್ಯಾಪಕರುಗಳಿಗೆ UGC Notification F/9-1/2010CPS/MISC pt.Vol-II ಅನ್ನು ವಿಶ್ವವಿದ್ಯಾಲಯದಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಯುಜಿಸಿಯು ದಿನಾಂಕ: 06-06-2024 ರಂದು ಪ್ರಕಟಣೆಯನ್ನು ಹೊರಡಿಸಿ, ವಿಶ್ವವಿದ್ಯಾಲಯದ ಸ್ನಾತಕ / ಸ್ನಾತಕೋತ್ತರ ವಿಭಾಗಗಳಲ್ಲಿರುವ ಅಧ್ಯಾಪಕರುಗಳಿಗೆ 12 ರಿಂದ 13ಎ (ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ) ಹಾಗೂ 13ಎ ಇಂದ 14 (ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ) ಶೈಕ್ಷಣಿಕ ಹಂತಗಳಿಗೆ ವೃತ್ತಿಪದೋನ್ನತಿಯ ಸ್ಥಾನೀಕರಣದ ಸೌಲಭ್ಯ ಪಡೆಯಲು ಯುಜಿಸಿ-2010ರ ನಿಯಮಾವಳಿ ಅಥವಾ 2018ರ ನಿಯಮಾವಳಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ವೃತ್ತಿ ಪದೋನ್ನತಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಿರುತ್ತದೆ. ಅದರಂತೆ 13ಎ ಮತ್ತು 14ಕ್ಕೆ ವೃತ್ತಿ ಪದೋನ್ನತಿಯ ಸ್ಥಾನೀಕರಣ ಪಡೆಯಲು ಈ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಿರುತ್ತದೆ.

| ಶೈಕ್ಷಣಿಕ ಹಂತ | ವೃತ್ತಿ ಪದೋನ್ನತಿ ಹೊಂದಲು ನಿಗದಿಪಡಿಸಿರುವ ಮಾನದಂಡಗಳು | |
|---|---|---|
| | 2010 | 2018 |
| 13ಎ<br>ಸಹ<br>ಪ್ರಾಧ್ಯಾಪಕ | Length of Service - Assistant Professor with three completed years in this Stage<br>(i) For those possess a Ph.D Degree, a minimum of one publication made during the period of service as Assistant Professor:<br>(ii) For those with a M.Phil, Degree, a minimum of two publications made during the period of service as Assistant Professor, and<br>(iii) For those without Ph.D., or M.Phil degree, at least three publications during the period of service as Assistant Professor in 8000 AGP. | i. Assistant Professors with three completed years service in the AGP of Rs.8000/-. Academic level 12<br>ii. A PhD degree in relevant/Allied/ discipline<br>iii. One Refresher course/Methodology workshop Syllabus upgradation Training/ (of At least 2 Weeks/10 days duration) OR two courses of 1 week duration (5 days in lieu of 10 days program) OR ONE MOOCs course or contribution towards development of e-conter in 4th quadrant (at least one quadrant) with minimum of 10 modules |



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

| | | |
|---|---|---|
| 14<br>ಪ್ರಾಧ್ಯಾಪಕ | Length of Service - Associate Professor with three completed years of service in Stage 4 and possessing a Ph.D Degree in the relevant discipline shall be eligible to be appointed / promoted and designated as Professor and be placed in the next higher grade (Stage 5) | i. Associate Professors with 3 completed years of service in the Academic level 13A(AGP of Rs.9000/-.)<br>ii. A PhD degree in relevant/Allied/ discipline<br>iii. has produced at least 1 Ph.d under the guidance, evidences of significant research during evaluation period |

ಮೇಲ್ಕಂಡ ಮಾಹಿತಿಗಳೊಂದಿಗೆ, ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಹಾಗೂ ಘಟಕ ಕಾಲೇಜುಗಳ ಅಧ್ಯಾಪಕರಿಗೆ ವೃತ್ತಿ ಪದೋನ್ನತಿ ನೀಡಲು ದಿನಾಂಕ:06-06-2024ರ ಯು.ಜಿ.ಸಿ. ಪ್ರಕಟಣೆಯನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಸರ್ಕಾರದ ಅನುಮೋದನೆಗೆ ಕಳುಹಿಸುವ ಸಲುವಾಗಿ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಕುಲಸಚಿವರು ಸಭೆಗೆ ಮಂಡಿಸಿದರು.

**ನಿರ್ಣಯ:** ಚರ್ಚೆಯ ನಂತರ, ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ ಕಾಲೇಜುಗಳ ಅಧ್ಯಾಪಕರ ವೃತ್ತಿಪದೋನ್ನತಿಗೆ ಸಂಬಂಧಿಸಿದಂತೆ, ದಿನಾಂಕ:06-06-2024ರ ಯು.ಜಿ.ಸಿ. ಪ್ರಕಟಣೆಯನ್ನು ವಿಶ್ವವಿದ್ಯಾಲಯದಲ್ಲಿಯೂ ಯಥಾವತ್ತಾಗಿ ಅಳವಡಿಸಿಕೊಳ್ಳುವ ಕ್ರಮಕ್ಕೆ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

## ಹಣಕಾಸು ವಿಭಾಗ

**2025–ಸಿಂ–2.17:** 2021–22ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳ ಅನುಪಾಲನಾ ವರದಿಯ ಅನುಮೋದನೆ ಕುರಿತು.

**ಚರ್ಚೆ:** ಸಭೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ, ಹಣಕಾಸು ಅಧಿಕಾರಿಗಳು 2021–22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಅನುಮೋದನೆಗೆ ಮಂಡಿಸಿ ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಕಲಂ–47, ಉಪಕಲಂ(4) ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯ ಲೆಕ್ಕಪರಿಶೋಧನೆ ಮತ್ತು ಮತ್ತು ಲೆಕ್ಕಪತ್ರ ಇಲಾಖೆಯಿಂದ ಲೆಕ್ಕಪರಿಶೋಧನೆ ನಡೆಸಿ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಗೆ ವಿಶ್ವವಿದ್ಯಾಲಯದ ಅನುಪಾಲನಾ ವರದಿಯನ್ನು ಸಿದ್ಧಪಡಿಸಿ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ. ಸಭೆಯ ಅನುಮೋದನೆ ನಂತರ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

ಸದಸ್ಯರಾದ ಶ್ರೀ ಮುಸಾವಿರ್ ಬಾಷಾರವರು ಮಾತನಾಡಿ, ಆಕ್ಷೇಪಣೆಗಳು ಹಾಗೂ ವಸೂಲಾತಿಗಳ ಬಗ್ಗೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗುತ್ತದೆ? ಎಂದರು. ಕುಲಸಚಿವರು ಮಾತನಾಡಿ, ಆಡಿಟ್ ಸಮಯದಲ್ಲಿ ಕೆಲವು ವಿಭಾಗದಿಂದ ಸಮರ್ಪಕ ಮಾಹಿತಿ ಹಾಗೂ ದಾಖಲಾತಿಗಳನ್ನು ಒದಗಿಸದಿರುವ ಪ್ರಕರಣದಲ್ಲಿ ಆಕ್ಷೇಪಣೆಗಳನ್ನು ಮಾಡಿರುತ್ತಾರೆ. ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಸರ್ಕಾರದ ನಿರ್ದೇಶನದ ಪ್ರಕಾರ ಅಡ್‌ಹಾಕ್ ಸಮಿತಿ ಹಾಗೂ ಆಡಿಟ್ ರಿವ್ಯೂ ಸಭೆಯಲ್ಲಿ ಆಕ್ಷೇಪಣೆಗಳಿಗೆ ದಾಖಲಾತಿಗಳನ್ನು ಒದಗಿಸಲಾಗುವುದು. ಅವುಗಳನ್ನು ಪರಿಶೀಲಿಸಿದ ನಂತರ ಸದರಿ ಸಭೆಗಳಲ್ಲಿ ವಸೂಲಾತಿ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ 2021–22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.

**2025–ಸಿಂ–2.17(ಎ):** 2024–25ನೇ ಆರ್ಥಿಕ ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಿದ ಸಭೆಯು ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಿತು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯದ 2024–25ನೇ ಆರ್ಥಿಕ ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
8/4

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2025–ಸಿಂ–2.18:** ಕಾಲೇಜುಗಳ 2025–26ನೇ ಸಾಲಿನ ಸಂಯೋಜನೆ ವರದಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸುವ ಬಗ್ಗೆ.

**ಚರ್ಚೆ:** ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ 2025–26ನೇ ಸಾಲಿನ ಸಂಯೋಜನೆ ವರದಿಗಳನ್ನು ಕುಲಸಚಿವರು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿದರು. ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ರವರು ಮಾತನಾಡಿ ಬಿ.ಇಡಿ. ಕಾಲೇಜುಗಳ ಬಗ್ಗೆ ಹಲವಾರು ದೂರುಗಳು ಬಂದಿವೆ. ಆದುದರಿಂದ ಬಿ.ಇಡಿ. ಕಾಲೇಜುಗಳ ಸಂಯೋಜನಾ ವರದರಿಯನ್ನು ತಡೆಹಿಡಿಯಬಹುದು ಎಂದರು. ಡಾ. ಜಿ. ಮಧು ರವರು ಮಾತನಾಡಿ ಎಲ್ಲಾ ಕಾಲೇಜುಗಳ ಅನುಮೋದನೆ ತಡೆಹಿಡಿಯುವುದು ಬೇಡ. ಸಮಸ್ಯೆಗಳ ಕುರಿತು ದೂರುಗಳು ಬಂದಿರುವ ಕಾಲೇಜುಗಳನ್ನು ಹೊರತುಪಡಿಸಿ ಉಳಿದ ಕಾಲೇಜುಗಳಿಗೆ ಅನುಮೋದನೆ ನೀಡಬಹುದು ಎಂದರು. ವಿಶೇಷ ಆಹ್ವಾನಿತರಾಗಿದ್ದ ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಪ್ರೊ.ನಾಗರಾಜ ರವರು ಮಾತನಾಡಿ, ಸ್ಥಳೀಯ ತಪಾಸಣಾ ಸಮಿತಿ ಭೇಟಿ ನೀಡಿ, ಪರಿಶೀಲಿಸಿ ಸರ್ಕಾರದ ಯು.ಯು.ಸಿ.ಎಂ.ಎಸ್. ಪೋರ್ಟಲ್ ಮೂಲಕ ಸಲ್ಲಿಸಿರುವ ಸಂಯೋಜನಾ ವರದಿಯನ್ನು ತಡೆಹಿಡಿಯಲು ಅವಕಾಶವಿಲ್ಲ. ಈಗ ಸಿಂಡಿಕೇಟ್ ಅನುಮೋದನೆ ನೀಡಿದ ನಂತರ ಸರ್ಕಾರಕ್ಕೆ ಕಳುಹಿಸಬೇಕು. ಮುಂದೆ ವಿಶ್ವವಿದ್ಯಾಲಯದಿಂದ ಕಾಲೇಜುಗಳಿಗೆ ಸಂಯೋಜನಾ ಆದೇಶ ನೀಡುವ ಸಂದರ್ಭದಲ್ಲಿ ತಡೆಹಿಡಿಯಬಹುದು ಎಂದರು. ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ ಕೆಲವು ಬಿ.ಇಡಿ. ಕಾಲೇಜುಗಳು ಸರಿಯಾಗಿ ನಡೆಯುತ್ತಿಲ್ಲವೆಂದು ದೂರುಗಳಿವೆ ಎಂದರು. ಶ್ರೀ ಬಿ.ಎನ್. ಶಶಿಧರರವರು ಮಾತನಾಡಿ ಸಮಸ್ಯೆಗಳು ಮತ್ತು ದೂರುಗಳು ಇರುವ ಬಿ.ಇಡಿ. ಕಾಲೇಜುಗಳ ಬಗ್ಗೆ ಪರಿಶೀಲಿಸಲು ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ಇನ್ನೊಂದು ಸಮಿತಿ ರಚಿಸಿರಿ ಎಂದರು. ಕುಲಸಚಿವರು ಮಾತನಾಡಿ ಸಂಯೋಜನೆ ತಡೆಹಿಡಿದಲ್ಲಿ ನ್ಯಾಯಾಲಯದಿಂದ ತಡೆಯಾಜ್ಞೆ ತರುತ್ತಾರೆ ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ 2025–26ನೇ ಸಾಲಿನ ಸಂಯೋಜನೆ ವರದಿಗಳನ್ನು ಸಭೆಯು ಅನುಮೋದಿಸಿತು.

**2025–ಸಿಂ–2.19:** 2025–26ನೇ ಸಾಲಿನ ಸಂಯೋಜನೆ ಶುಲ್ಕದ ಕುರಿತು.

**ನಿರ್ಣಯ:** ಯು.ಯು.ಸಿ.ಎಂ.ಎಸ್. ತಂತ್ರಾಂಶ ಜಾರಿಗೆ ಬಂದಾಗಿನಿಂದಲೂ ಕಾಲೇಜುಗಳ/ಸಂಸ್ಥೆಗಳ ಹೆಸರು ತಂತ್ರಾಂಶದಲ್ಲಿ ಬದಲಾವಣೆಯಾಗುತ್ತಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ವಿತರಿಸುವ ಅಂಕಪಟ್ಟಿಗಳಲ್ಲಿ ತಪ್ಪಾಗಿ ಮುದ್ರಿತವಾಗಿರುವ ಕಾಲೇಜಿನ ಹೆಸರನ್ನು ಬದಲಾವಣೆ ಮಾಡಲಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ 2025–26ನೇ ಸಾಲಿನ ಸಂಯೋಜನಾ ಅರ್ಜಿಯಲ್ಲಿ ಕಾಲೇಜುಗಳ/ಸಂಸ್ಥೆಗಳ ಹೆಸರು ಬದಲಾವಣೆಗೆ ಅವಕಾಶ ಕಲ್ಪಿಸಲಾಗಿದ್ದು, ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ಶಿರೋನಾಮೆ ಬದಲಾವಣೆಗೆ ವಿಧಿಸಲಾಗುತ್ತಿದ್ದ ಶುಲ್ಕಕ್ಕೆ ಇದೊಂದು ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ವಿನಾಯಿತಿ ನೀಡಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2025–ಸಿಂ–2.20:** ವಿಶ್ವವಿದ್ಯಾಲಯದಲ್ಲಿ ಹೊಸದಾಗಿ Digital Academic Portal ನ್ನು ಅಳವಡಿಸುವ ಕುರಿತಂತೆ ಇ–ಟೆಂಡರ್ ಪ್ರಕ್ರಿಯೆ ಅನುಮೋದನೆ ಬಗ್ಗೆ.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಶಿಕ್ಷಣದ ನಿರ್ವಹಣೆಯನ್ನು ಸುವ್ಯವಸ್ಥಿತಗೊಳಿಸುವ ಸಲುವಾಗಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಗುಣಮಟ್ಟ, ಅಸೈನ್‌ಮೆಂಟ್ ಸಲ್ಲಿಕೆ, ಮೌಲ್ಯಮಾಪನ ಮತ್ತು ವೈವಿಧ್ಯಮಯ ಶಿಕ್ಷಣವನ್ನು ಪೂರೈಸಲು ಎಲ್ಲಾ ಅಗತ್ಯ ಮಾಹಿತಿ/ದಾಖಲೆಗಳನ್ನು ಒಂದು ಆ್ಯಪ್‌ನಲ್ಲಿ



8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಅಳವಡಿಸಿ ಸುತ್ತೋಲೆಗಳು, ಸಿಲಬಸ್, ಪರೀಕ್ಷಾ ಅಧಿಸೂಚನೆ ಸೇರಿದಂತೆ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ವ್ಯವಸ್ಥೆಯ ಉದ್ದೇಶಕ್ಕಾಗಿ ಹೊಸದಾಗಿ Digital Academic Portal ನ್ನು ಅಳವಡಿಸುವ ಸಂಬಂಧ ನಡೆಸಲಾದ ಟೆಂಡರ್ ಪ್ರಕ್ರಿಯೆಯನ್ನು ಸಭೆಗೆ ಮಂಡಿಸಿದರು. ಇದೇ ಸಂದರ್ಭದಲ್ಲಿ ಇ–ಟೆಂಡರ್‌ನಲ್ಲಿ ಎಲ್–1 ಆಗಿರುವ M/s Edu-Easy India Pvt., Ltd., Dharwad ಸಂಸ್ಥೆಯ ಪ್ರತಿನಿಧಿಗಳು ತಂತ್ರಾಂಶ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ಕುರಿತು ಪ್ರಾತ್ಯಕ್ಷಿಕೆ ತೋರಿಸಿದರು. ಶ್ರೀ ಶಶಿಧರ ಬಿ.ಎಸ್. ರವರು ಮಾತನಾಡಿ ಈಗಾಗಲೇ ಯು.ಯು.ಸಿ.ಎಂ.ಎಸ್. ಸಾಫ್ಟ್‌ವೇರ್ ಇದ್ದು, ಮತ್ತೊಂದು ಸಾಫ್ಟ್‌ವೇರ್ ಅಗತ್ಯವಿದೆಯೇ? ಎಂದರು. ಸಂಸ್ಥೆಯ ಪ್ರತಿನಿಧಿಯವರು ಮಾತನಾಡಿ, ಇದು ಯು.ಯು.ಸಿ.ಎಂ.ಎಸ್. ಗಿಂತ ವಿಭಿನ್ನವಾದ ತಂತ್ರಾಂಶವಾಗಿದೆ. ಇದು ಯು.ಯು.ಸಿ.ಎಂ.ಎಸ್. ನಲ್ಲಿ ಇಲ್ಲದ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಲಿದೆ. ಇದನ್ನು ಈಗಾಗಲೇ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಲ್ಲಿ ಅನುಷ್ಠಾನಗೊಳಿಸಲಾಗಿದೆ ಎಂದರು. ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಇದರ ಬಗ್ಗೆ ತಜ್ಞರನ್ನು ಒಳಗೊಂಡ ಒಂದು ಸಮಿತಿ ರಚಿಸಿ ಈ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಬೇಕು ಎಂದರು. ಪ್ರೊ. ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ಈ ತಂತ್ರಾಂಶದಲ್ಲಿನ ಸೇವೆಗಳ ಬಗ್ಗೆ ಅಧ್ಯಯನ ವಿಭಾಗಗಳ ಬಿ.ಓ.ಎಸ್. ಸಭೆಗಳಲ್ಲಿ ಚರ್ಚಿಸಿ ನಿರ್ಣಯಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬಹುದು ಎಂದರು. ಶ್ರೀ ಶಾಂತಕುಮಾರ್ ಮತ್ತು ಡಾ.ಮಧು ರವರು ಮಾತನಾಡಿ, Trail Basis ನಲ್ಲಿ ಮೂರು ತಿಂಗಳು ತಂತ್ರಾಂಶವನ್ನು ಉಪಯೋಗಿಸಿ, ಫಲಿತಾಂಶವನ್ನು ನೋಡಿಕೊಂಡು ಮುಂದುವರೆಸುವ ಬಗ್ಗೆ ನಿರ್ಣಯಿಸಬಹುದು ಎಂದರು. ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ, ಇದರ ಬಗ್ಗೆ ಸಾಕಷ್ಟು ಪರಿಶೀಲನೆ ಹಾಗೂ ಚರ್ಚೆ ಆಗಬೇಕಾಗಿರುವುದರಿಂದ ಈ ವಿಷಯವನ್ನು ಮುಂದೂಡುವುದು ಉತ್ತಮ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ವಿಷಯವನ್ನು ಮುಂದೂಡಲಾಯಿತು.

**025–ಸಿಂ–2.21:** ಕುವೆಂಪು ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನವನ್ನು ಆಚರಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಕುವೆಂಪು ವಿಶ್ವವಿದ್ಯಾಲಯವು ಜೂನ್ 29, 1987 ರಂದು ಸ್ಥಾಪನೆಗೊಂಡಿದ್ದು, ಈಗಾಗಲೇ 38 ವರ್ಷಗಳು ಸಂದಿವೆ. ಆದರೆ, ಈವರೆಗೂ 'ಸ್ಥಾಪನಾ ದಿನ'ವನ್ನು ಆಚರಣೆ ಮಾಡುತ್ತಿಲ್ಲ. ಆದುದರಿಂದ, ವಿಶ್ವವಿದ್ಯಾಲಯ ಆರಂಭಗೊಂಡ ದಿನವನ್ನು ಇನ್ನು ಮುಂದೆ "ಸಂಸ್ಥಾಪನಾ ದಿನ"ವನ್ನಾಗಿ ಆಚರಿಸಬಹುದಾಗಿದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಈ ಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು, ಅಧ್ಯಾಪಕೇತರರು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಯಾವುದೇ ವಿಷಯದಲ್ಲಿ ಸಾಧಿಸಿರುವ ವಿಶೇಷ ಸಾಧನೆಗಳನ್ನು ಗುರುತಿಸಿ ಗೌರವಿಸಲಾಗುವುದು. ಅಲ್ಲದೇ ಆಯಾ ವರ್ಷದಲ್ಲಿ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಸಾಧನೆ, ಸಂಶೋಧನೆ ಮುಂತಾದ ಅಂಶಗಳನ್ನು ಒಳಗೊಂಡ ವಸ್ತು ಪ್ರದರ್ಶನ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ 'ಸ್ಥಾಪನಾ ದಿನ'ವನ್ನು ವೈಶಿಷ್ಟ್ಯಪೂರ್ಣ ವಾಗಿ ಆಚರಿಸಲಾಗುವುದು ಎಂದರು. ಶ್ರೀ ಶಶಿಧರ ಎಂ. ರವರು ಮಾತನಾಡಿ, ಉತ್ತಮ ಸಾಧನೆ ಮಾಡಿದ ಒಂದು ಸಂಯೋಜಿತ/ಘಟಕ ಕಾಲೇಜನ್ನು ಕೂಡ ಆಯ್ಕೆ ಮಾಡಿ ಪ್ರಶಸ್ತಿ ನೀಡಿದರೆ ಇನ್ನಷ್ಟು ಅರ್ಥಪೂರ್ಣವಾಗುತ್ತದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಕುವೆಂಪು ವಿಶ್ವವಿದ್ಯಾಲಯ ಅರಂಭಗೊಂಡ ಜೂನ್ 29 ನ್ನು ಪ್ರತಿ ವರ್ಷ 'ಸ್ಥಾಪನಾ ದಿನ'ವಾಗಿ ಆಚರಿಸಲು ಮತ್ತು ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು, ಅಧ್ಯಾಪಕೇತರರು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳ ವಿಶೇಷ ಸಾಧನೆಗಳನ್ನು ಗುರುತಿಸಿ ಗೌರವಿಸಲು, ಉತ್ತಮ ಸಾಧನೆ ಮಾಡಿದ ಸಂಯೋಜಿತ/ಘಟಕ ಕಾಲೇಜನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡುವುದು ಮತ್ತು ಆಯಾ ವರ್ಷದಲ್ಲಿ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಸಾಧನೆ, ಸಂಶೋಧನೆ ಮುಂತಾದ ಅಂಶಗಳನ್ನು ಒಳಗೊಂಡ ವಸ್ತುಪ್ರದರ್ಶನ ಏರ್ಪಡಿಸುವುದರ ಮೂಲಕ ಸ್ಥಾಪನಾ ದಿನವನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.



8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

## ಎಸ್ಟೇಟ್ ವಿಭಾಗ

**2025–ಸಿಂ–2.22:** ಬ್ಯಾಂಕ್ ಆಫ್ ಬರೋಡದವರಿಗೆ ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿ ಡಿಜಿಟಲ್ ಸರ್ವಿಸ್ ಔಟ್ಲೆಟ್ ಸ್ಥಾಪಿಸಲು ಅವಕಾಶ ನೀಡುವ ಬಗ್ಗೆ.

**ನಿರ್ಣಯ:** ವಿದ್ಯಾರ್ಥಿಗಳು ಮತ್ತು ನೌಕರರಿಗೆ ಸುಲಭ ರೀತಿಯಲ್ಲಿ ಅನುಕೂಲವಾಗುವಂತೆ ಸೇವೆ ಒದಗಿಸುವ ಸಲುವಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ಬ್ಯಾಂಕ್ ಆಫ್ ಬರೋಡಾದ ಡಿಜಿಟಲ್ ಔಟ್‌ಲೆಟ್ ಸ್ಥಾಪಿಸಲು ಅನುಮತಿಸಿದ ಸಭೆಯು, ಡಿಜಿಟಲ್ ಔಟ್‌ಲೆಟ್ ಸ್ಥಾಪನೆಗಾಗಿ ಸ್ಥಳಾವಕಾಶ ಒದಗಿಸಲು ನಿರ್ಣಯಿಸಲಾಯಿತು.

**2025–ಸಿಂ–2.23:** ವಿಜ್ಞಾನ ಕೇಂದ್ರ ಕೆಟಗರಿ–2 ಸ್ಥಾಪನೆಗೆ ಸಹ್ಯಾದ್ರಿ ಕಾಲೇಜ್ ಆವರಣದ ಜಮೀನನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ– ಬೆಂಗಳೂರು ಇವರಿಗೆ 7 ಎಕರೆ ಜಮೀನನ್ನು ಹಸ್ತಾಂತರಿಸಿರುವ ಬಗ್ಗೆ.

**ಚರ್ಚೆ:** ಕುಲಸಚಿವರು ಮಾತನಾಡಿ, ದಿನಾಂಕ:19–11–2024ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಸೈನ್ಸ್‌ಪಾರ್ಕ್ ನಿರ್ಮಾಣಕ್ಕಾಗಿ ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ನೀಡಿರುವ 07 ಎಕರೆ ಜಾಗವನ್ನು ಹಿಂಪಡೆಯಲು ನಿರ್ಣಯಿಸಿರುವುದನ್ನು ಮರುಪರಿಶೀಲಿಸಲು ಮಂಡಿಸಿದೆ ಎಂದರು. ಶ್ರೀ ಕೆ.ಪಿ.ಶ್ರೀಪಾಲ್ ರವರು ಮಾತನಾಡಿ, ಶ್ರೀ ಆಯನೂರು ಮಂಜುನಾಥ ಸೇರಿದಂತೆ ಸಹ್ಯಾದ್ರಿ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಹಾಗೂ ಪ್ರಾಂಶುಪಾಲರು ಮಾನ್ಯ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ, ಸಹ್ಯಾದ್ರಿ ಕಾಲೇಜಿನ ಜಾಗದಲ್ಲಿ ಸೈನ್ಸ್‌ಪಾರ್ಕ್ ನಿರ್ಮಾಣ ಬೇಡ, ಕಾಲೇಜಿನ ಭವಿಷ್ಯದ ಅಭಿವೃದ್ಧಿಗಾಗಿ ಸದರಿ ಜಾಗ ಅಗತ್ಯವಿದೆ ಎಂಬುದನ್ನು ಮನವರಿಕೆ ಮಾಡಿ ಕೆಲಸ ನಿಲ್ಲಿಸುವಂತೆ ಮನವಿ ಮಾಡಿದ್ದೇವೆ. ಅವರು ಸರ್ಕಾರದಿಂದ ಆದೇಶ ಬಂದಿದ್ದರಿಂದ ಕೆಲಸ ಆರಂಭಿಸಿದ್ದೇವೆ. ನೀವು ಸರ್ಕಾರಕ್ಕೆ ಮನವಿ ಮಾಡಿ, ಸರ್ಕಾರದಿಂದ ಆದೇಶ ಬಂದಲ್ಲಿ ಅದರ ಪ್ರಕಾರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ ಎಂದರು. ಮುಂದುವರೆದು ಮಾತನಾಡಿದ ಅವರು, ಈ ಹಿಂದೆ ಖೇಲೋ ಇಂಡಿಯಾದ ಅಡಿಯಲ್ಲಿ ನಿರ್ಮಾಣಕ್ಕಾಗಿ ಸಹ್ಯಾದ್ರಿ ಕಾಲೇಜಿನ ಜಾಗವನ್ನು ಆಯ್ಕೆ ಮಾಡಿದ್ದ ಸಂದರ್ಭದಲ್ಲಿ ಕೂಡ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಮುಷ್ಕರ ಹೂಡಿ, ರಸ್ತೆ ತಡೆ ನಡೆಸಿ ವಿರೋಧಿಸಿದ್ದೆವು. ಇದರಿಂದಾಗಿ 'ಖೇಲೋ ಇಂಡಿಯಾ ಯೋಜನೆ' ಬೇರೆಡೆಗೆ ಸ್ಥಳಾಂತರವಾಯಿತು ಎಂದರು. ಆದುದರಿಂದ ಪ್ರಯತ್ನ ಮಾಡೋಣ. ಸಾಧ್ಯವಾದರೆ ಒಂದು ನಿಯೋಗ ತೆರಳಿ ಅಧಿಕಾರಿಗಳು ಹಾಗೂ ಮಂತ್ರಿಗಳಿಗೆ ಮನವಿ ಸಲ್ಲಿಸೋಣ ಎಂದರು. ಶ್ರೀ ಬಿ.ಎನ್. ಶಶಿಧರ್‌ರವರು ಮಾತನಾಡಿ ಸಿಂಡಿಕೇಟ್‌ನಲ್ಲಿ ನಿರ್ಣಯ ಕೈಗೊಂಡು ಸರ್ಕಾರಕ್ಕೆ ಪತ್ರ ಬರೆಯಬಹುದು ಎಂದರು. ಕುಲಸಚಿವರು ಮಾತನಾಡಿ, ಈ ಹಿಂದೆ ದಿನಾಂಕ: 28–02–2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿ ಅನುಮತಿಸಿದ ಮೇರೆಗೆ ಸರ್ಕಾರಕ್ಕೆ ಒಪ್ಪಿಗೆ ನೀಡಲಾಗಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯರುಗಳು ಈಗ ವಶಕ್ಕೆ ಪಡೆದಿರುವ ಜಾಗವನ್ನು ಸರ್ಕಾರಕ್ಕೆ ನೀಡಲು ಸಾಧ್ಯವಿಲ್ಲವೆಂದು ಒಕ್ಕೊರಲಿನಿಂದ ಒತ್ತಾಯಿಸಿದರು.

**ನಿರ್ಣಯ:** ಸುಧೀರ್ಘವಾಗಿ ಚರ್ಚಿಸಿದ ನಂತರ ಈ ವಿಷಯದ ಕುರಿತಾಗಿ ಇನ್ನೊಂದು ವಿಶೇಷ ಸಭೆಯನ್ನು ನಡೆಸಿ, ವಿವರವಾಗಿ ಚರ್ಚಿಸಿ, ನಿಯೋಗದೊಂದಿಗೆ ಖುದ್ದಾಗಿ ಸಚಿವರು ಹಾಗೂ ಅಧಿಕಾರಿಗಳನ್ನು ಭೇಟಿ ಮಾಡಿ ಸಹ್ಯಾದ್ರಿ ಕಾಲೇಜಿನ 7 ಎಕರೆ ಜಾಗವನ್ನು ಸೈನ್ಸ್‌ಪಾರ್ಕ್ ನಿರ್ಮಾಣಕ್ಕಾಗಿ ಸರ್ಕಾರ ಹಸ್ತಾಂತರ ಮಾಡಿಕೊಂಡಿರುವ ಆದೇಶವನ್ನು ರದ್ದುಪಡಿಸಿ, ಕಾಲೇಜಿಗೆ ಹಿಂದಿರುಗಿಸುವಂತೆ ಮನವಿ ಹಾಗೂ ಪ್ರಸ್ತಾವನೆ ಸಲ್ಲಿಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

8/4/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

25-ಸಿಂ-2.24: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ
ಯಾವುದೂ ಇಲ್ಲ.

2025-ಸಿಂ-2.25: <u>ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು</u>

2025-ಸಿಂ-2.25(1): ಶ್ರೀ ಶಶಿಧರ್ ಬಿ.ಎನ್.

2025-ಸಿಂ-2.25(1ಎ): ದಿನಾಂಕ:01-08-2024 ರಿಂದ 31-01-2025 ರ (ಆರು ತಿಂಗಳು) ಅವಧಿಯ ಸ್ವೀಕೃತಿ ಮತ್ತು ವೆಚ್ಚಗಳು. (Receipts and payments)

ಸದಸ್ಯರಾದ ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ, ನಾನು ಕೇಳಿರುವ ಸ್ವೀಕೃತಿ ಮತ್ತು ವೆಚ್ಚಗಳ ಮಾಹಿತಿಯನ್ನು ಒದಗಿಸಿದ್ದು, ಇದನ್ನು ಪರಿಶೀಲಿಸಲು ನನಗೆ ಸಮಯಾವಕಾಶ ಬೇಕಾಗಿದ್ದು, ಅಗತ್ಯವಿದ್ದಲ್ಲಿ ಈ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸುವುದಾಗಿ ತಿಳಿಸಿದರು.

2025-ಸಿಂ-2.25(1ಬಿ): ಪ್ರಸಕ್ತ ಸಾಲಿನ ದೂರ ಶಿಕ್ಷಣದ ದಾಖಲಾತಿ, ಶೈಕ್ಷಣಿಕ ಚಟುವಟಿಕೆ ಹಾಗೂ ಕಳೆದ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಪರೀಕ್ಷೆ.

ಕುಲಸಚಿವರು ಮಾತನಾಡಿ, ದೂರಶಿಕ್ಷಣಕ್ಕೆ ಸಂಬಂಧಪಟ್ಟಂತೆ, ಸಮಿತಿಯನ್ನು ರಚಿಸಲಾಗಿತ್ತು. ಆದರೆ ಸಮಿತಿ ಈವರೆಗೆ ವರದಿ ಸಲ್ಲಿಸಿಲ್ಲ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ದೂರ ಶಿಕ್ಷಣ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ದೂರ ಶಿಕ್ಷಣ ನಿರ್ದೇಶನಾಲಯದಿಂದ ಪ್ರವೇಶಾತಿ ಅನುಮೋದನಾ ಪಟ್ಟಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸಿದಲ್ಲಿ, ಪರಿಶೀಲಿಸಿ ತಕ್ಷಣ ಪರೀಕ್ಷೆಗಳನ್ನು ನಡೆಸಲು ಪರೀಕ್ಷಾ ಅಧಿಸೂಚನೆಯನ್ನು ಹೊರಡಿಸಲಾಗುವುದು ಎಂದರು.

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ವಿವಿಧ ಅಧ್ಯಯನ ಕೇಂದ್ರಗಳಿಂದ ಬರಬೇಕಾಗಿರುವ ಬಾಕಿ ಮೊಬಲಗು ರೂ.4.10 ಕೋಟಿ (ರೂಪಾಯಿ ನಾಲ್ಕು ಕೋಟಿ ಹತ್ತು ಲಕ್ಷ ಮಾತ್ರ)ಗಳ ವಸೂಲಿಗೆ ಏನು ಕ್ರಮ ಕೈಗೊಳ್ಳಲಾಗಿದೆ. ಹಿಂದಿನ ಸಿಂಡಿಕೇಟ್‌ನಲ್ಲಿ ಅವರ ವಿರುದ್ಧ ಎಫ್.ಐ.ಆರ್. ದಾಖಲಿಸಲು ನಿರ್ಣಯವಾಗಿತ್ತು ಎಂದರು.

ಕುಲಸಚಿವರು ಮಾಹಿತಿ ನೀಡಿ, ಬಾಕಿ ಉಳಿಸಿಕೊಂಡಿರುವ ಅಧ್ಯಯನ ಕೇಂದ್ರಗಳ ವಿರುದ್ಧ ನ್ಯಾಯಾಲಯಕ್ಕೆ ಹೋದಾಗ ವಿಶ್ವವಿದ್ಯಾಲಯದ ವಿರುದ್ಧ ತೀರ್ಪು ಬಂದಿದೆ. ಅಧ್ಯಯನ ಕೇಂದ್ರಗಳ ಮೂಲ ಮಾಲೀಕರು ಬೇರೆ ಇದ್ದು, ಕೇಂದ್ರಗಳನ್ನು ನಡೆಸುವವರೇ ಬೇರೆ ಇದ್ದಾರೆ. ಆದುದರಿಂದ, ಮೂಲ ಮಾಲೀಕರಿಗೆ ನೋಟೀಸ್ ನೀಡಲಾಗುವುದು. ನೋಟೀಸ್‌ಗೆ ಸಕಾರಾತ್ಮಕ ಉತ್ತರ ಬಾರದಿದ್ದಲ್ಲಿ ಎಫ್.ಐ.ಆರ್. ದಾಖಲಿಸಲಾಗುವುದು. ಕೆಲ ಕೇಂದ್ರದವರು ಬಾಕಿ ಉಳಿಸಿಕೊಂಡಿರುವ ಹಣವನ್ನು ಪಾವತಿಸಲು ಒಪ್ಪಿಕೊಂಡಿದ್ದಾರೆ ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಎಫ್.ಐ.ಆರ್.ದಾಖಲಿಸಿದರೆ, ಅವರು ಜಾಮೀನು ಪಡೆದುಕೊಂಡು ಬರುತ್ತಾರೆ. ಆದುದರಿಂದ, ಬಾಕಿ ವಸೂಲಿಗೆ ಕ್ರಮ ಕೈಗೊಂಡರೆ ಒಳ್ಳೆಯದು ಎಂದರು. ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ ಬಾಕಿ ಮೊಬಲಗನ್ನು ಕಂತುಗಳಲ್ಲಿ ಪಾವತಿಸಲು ತಿಳಿಸಬಹುದು ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಮುಂದಿನ ಸಭೆಗೆ ವಿವರವಾದ ಮಾಹಿತಿ ಒದಗಿಸುವಂತೆ ಕೋರಿದರು.

2025-ಸಿಂ-2.25(1ಸಿ): ವಿಶ್ವವಿದ್ಯಾಲಯದ ಹೈದರಾಬಾದ್ ಕರ್ನಾಟಕ (HyK) ಕೋಟಾದಡಿಯಲ್ಲಿನ ಸಿಬ್ಬಂದಿಗಳ ಬಡ್ತಿ.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಹೈದರಾಬಾದ್ ಕರ್ನಾಟಕ (HyK) ಕೋಟಾದಲ್ಲಿ ನೇಮಕವಾದ ಸಿಬ್ಬಂದಿಗಳಲ್ಲಿ ಜವಾನ ಮತ್ತು ಕಾವಲುಗಾರ ಹುದ್ದೆಯ 03 ಸಿಬ್ಬಂದಿಗಳು ಹಾಗೂ ಅಟೆಂಡರ್ ಹುದ್ದೆಯ 03 ಸಿಬ್ಬಂದಿಗಳಿಗೆ ಕಿರಿಯ ಸಹಾಯಕ ಹುದ್ದೆಗೆ ಬಡ್ತಿ ನೀಡಲಾಗಿದೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಉಳಿದವರಿಗೆ ವೃಂದವಾರು ಮುಂಬಡ್ತಿಗೆ ನಿಗದಿಪಡಿಸಿರುವ ಹುದ್ದೆಗಳಿಗೆ ಅನುಸಾರವಾಗಿ ಅರ್ಹ ಸಿಬ್ಬಂದಿಗಳಿಗೆ ಬಡ್ತಿ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದರು.

2025–ಸಿಂ–2.25(2): ಶ್ರೀ ಲಕ್ಷ್ಮಿಕಾಂತ ಚಿಮನೂರು

2025–ಸಿಂ–2.25(2ಎ): ಖಾಲಿ ಇರುವ ಟೀಚಿಂಗ್ ಮತ್ತು ನಾನ್ ಟೀಚಿಂಗ್ ಹುದ್ದೆಗಳನ್ನು ನೇಮಕ ಮಾಡುವ ಬಗ್ಗೆ.

ಈ ಕೆಳಕಂಡ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

- ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳು ಹಾಗೂ ಹೊಸದಾಗಿ ಹುದ್ದೆಗಳನ್ನು ಸೃಜಿಸಲು ಹಾಗೂ ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ.

- ದಿನಾಂಕ:17–12–2018ರ ಸರ್ಕಾರದ ಪತ್ರದಲ್ಲಿ 24 ಬೋಧಕ/ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಸಲಾಗಿತ್ತು. ಆದರೆ, ನಂತರದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 136 ಯುಎನ್ಇ 2018, ದಿನಾಂಕ:05–11–2018ರಲ್ಲಿ ವಿಶ್ವವಿದ್ಯಾಲಯಗಳ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದನ್ನು ಕೂಡಲೇ ಸ್ಥಗಿತಗೊಳಿಸುವಂತೆ ಸೂಚಿಸಲಾಗಿದೆ. ಆದ್ದರಿಂದ ಬೋಧಕ / ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಮಾರ್ಗಸೂಚಿಗಳನ್ನು ಹೊರಡಿಸಿ ಅನುಮತಿಸಿದ ನಂತರ ಅನುಮತಿಸಿರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ನಿಯಮಾನುಸಾರ ಕ್ರಮವಹಿಸುವಂತೆ ತಿಳಿಸಿರುತ್ತಾರೆ.

- ಮಂಜೂರಾಗಿ ಖಾಲಿ ಇರುವ 266 ಬೋಧಕೇತರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಮತ್ತೊಮ್ಮೆ ಪ್ರಸ್ತಾವನೆಯನ್ನು ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರಿಂದ ಸದರಿ ಹುದ್ದೆಗಳಿಗೆ ರೋಸ್ಟರ್ ಸಿದ್ಧಪಡಿಸಿ, ದೃಢೀಕರಣ ಪಡೆದು ದಿನಾಂಕ:20–03–2023ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರದಿಂದ ಕೆಲವೊಂದು ಸ್ಪಷ್ಟೀಕರಣ ಕೋರಿ ಪತ್ರಿಸಿದ್ದು, ತತ್ಸಂಬಂಧ ಸ್ಪಷ್ಟೀಕರಣವನ್ನು ಸರ್ಕಾರಕ್ಕೆ ನೀಡಲಾಗಿದೆ. ಪ್ರಸ್ತುತ ಸರ್ಕಾರದ ಆದೇಶದ ಪ್ರಕಾರ ಪರಿಶಿಷ್ಟ ಜಾತಿಯ ಒಳ ಮೀಸಲಾತಿಯ ಕುರಿತಂತೆ ಸರ್ಕಾರ ರಚಿಸಿರುವ ನ್ಯಾ.ನಾಗಮೋಹನದಾಸ್ ಸಮಿತಿಯ ವರದಿ ಬಂದ ನಂತರ ಸರ್ಕಾರದ ಆದೇಶದ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

2025–ಸಿಂ–2.25(2ಬಿ): ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲರನ್ನು ಮಾನ್ಯ ಉಚ್ಛನ್ಯಾಯಾಲಯದ ಆದೇಶ W.P. No. 214493/2022 ದಿನಾಂಕ:09–06–2023 ರಂತೆ ಮರು ನೇಮಕ ಮಾಡುವ ಬಗ್ಗೆ.

ಸದಸ್ಯರಿಗೆ ಈ ಕೆಳಕಂಡ ಮಾಹಿತಿಗಳನ್ನು ಒದಗಿಸಲಾಯಿತು.
ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಿಗೆ ಪ್ರಾಂಶುಪಾಲರ ಹುದ್ದೆಗಳನ್ನು ಸೃಜನೆ ಮಾಡಿಕೊಳ್ಳುವ ಸಂಬಂಧ ಕರಡು ಪರಿನಿಯಮವನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ. ಸಹ್ಯಾದ್ರಿ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜುಗಳಿಗೆ ಸಂಬಂಧಿಸಿದಂತೆ ಮೂರೂ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರುಗಳನ್ನು ಒಳಗೊಂಡಂತೆ ಅಧಿಸೂಚಿಸಲಾದ ಸಂಯುಕ್ತ ಜೇಷ್ಠತಾ ಪಟ್ಟಿಯನುಸಾರ ಪ್ರಭಾರ ಪ್ರಾಂಶುಪಾಲರನ್ನಾಗಿ ನೇಮಕ ಮಾಡಲಾಗುತ್ತಿತ್ತು. ಮಾನ್ಯ ಕುಲಪತಿಗಳು ದಿನಾಂಕ:07–05–2022 ರಂದು ಯುಜಿಸಿ ನಿಯಮದ ಪ್ರಕಾರ ಪ್ರಭಾರ ಪ್ರಾಂಶುಪಾಲರ ಹುದ್ದೆಗೆ ಆಂತರಿಕವಾಗಿ ಅರ್ಜಿಗಳನ್ನು ಕರೆದು ಸಂದರ್ಶನ ನಡೆಸಿ ಕೂಡಲೇ ಭರ್ತಿ ಮಾಡಲು ಆದೇಶಿಸಿದ್ದರು. ಅದರಂತೆ ಪ್ರಕ್ರಿಯೆ ಕೈಗೊಂಡಿದ್ದು, ಡಾ. ಎನ್.ರಾಜೇಶ್ವರಿ ಇವರು ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಸಹ್ಯಾದ್ರಿ ವಿಜ್ಞಾನ ಕಾಲೇಜಿಗೆ ತಾತ್ಕಾಲಿಕ ಪ್ರಾಂಶುಪಾಲರ ನೇಮಕಾತಿ ಸಂಬಂಧ ದಿನಾಂಕ:05–11–2022 ರಂದು ನಡೆಯಲಿರುವ ಸಂದರ್ಶನವನ್ನು ರದ್ದುಪಡಿಸುವಂತೆ



8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ರಿಟ್ ಪಿಟಿಷನ್ ನಂ.21483/2022 (S-RES) ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಸದರಿ ಪ್ರಕ್ರಿಯೆಗೆ ತಡೆಯಾಜ್ಞೆ ನೀಡಿದ್ದು, ದಿನಾಂಕ:09-06-2023ರಂದು ಮಾನ್ಯ ಉಚ್ಚ ನ್ಯಾಯಾಲಯವು ಆದೇಶ ನೀಡಿ ಆಯ್ಕೆ ಪ್ರಕ್ರಿಯೆಯನ್ನು ಆದಷ್ಟು ಬೇಗನೆ ಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ಆದೇಶ ನೀಡಿರುತ್ತದೆ ಎಂದರು.

ಶ್ರೀ ಕೆ.ಪಿ. ಶ್ರೀಪಾಲ್, ಶ್ರೀ ಮುಸಾವೀರ್ ಬಾಷಾ ಮತ್ತು ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರನ್ನು ಆದಷ್ಟು ಬೇಗನೆ ಬದಲಿಸಬೇಕೆಂದರು. ಕುಲಸಚಿವರು ಮಾಹಿತಿ ನೀಡಿ, ನ್ಯಾಯಾಲಯದ ಆದೇಶದ ಪ್ರಕಾರ ಪರಿಶೀಲಿಸಿ ಘಟಕ ಕಾಲೇಜುಗಳ ಪ್ರಾಂಶುಪಾಲರನ್ನು ನೇಮಕ ಮಾಡಲು ಕ್ರಮಕೈಗೊಳ್ಳಲಾಗುವುದು ಎಂದರು.

**2025-ಸಿಂ-2.25(2ಸಿ):** ತಾಂತ್ರಿಕ ಸಲಹೆಗಾರರಾಗಿರುವ ನಿವೃತ್ತ ಕಾರ್ಯಪಾಲಕ ಇಂಜಿನಿಯರ್ ಶ್ರೀಯುತ ಶಿವಕುಮಾರ್ ಹಂಪಾಳೆ ರವರನ್ನು ಬಿಡುಗಡೆಗೊಳಿಸುವ ಬಗ್ಗೆ.

ಕುಲಸಚಿವರು ಮಾತನಾಡಿ, ಶೀಘ್ರದಲ್ಲಿಯೇ ನ್ಯಾಕ್ ಸಮಿತಿಯು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲಿದ್ದು, ವಿಶ್ವವಿದ್ಯಾಲಯದ ಸಿವಿಲ್ ಕಾಮಗಾರಿಗಳು, ರಸ್ತೆ, ಇನ್ನಿತರೆ ಕಾಮಗಾರಿಗಳು ಮತ್ತು ಅಗತ್ಯ ಕೆಲಸ ಕಾರ್ಯಗಳನ್ನು ಗುಣಮಟ್ಟದಲ್ಲಿ ಹಾಗೂ ಸಮರೋಪಾದಿಯಲ್ಲಿ ನಡೆಸಬೇಕಾಗಿರುತ್ತದೆ. ಪ್ರಸ್ತುತ ಇಂಜಿನಿಯರಿಂಗ್ ವಿಭಾಗದಲ್ಲಿ ಒಬ್ಬರೇ ಖಾಯಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಪ್ರಗತಿಯಲ್ಲಿರುವ ವಿವಿಧ ಕಾಮಗಾರಿಗಳ ಮೇಲ್ವಿಚಾರಣೆಗಾಗಿ ನುರಿತ ಇಂಜಿನಿಯರ್‌ರವರ ಅವಶ್ಯಕತೆ ಇರುವುದರಿಂದ ಹಾಗೂ ಮುಂದೆ ನಿರ್ವಹಿಸಬೇಕಾಗಿರುವ ಅಭಿವೃದ್ಧಿ ಕಾರ್ಯಗಳಿಗೆ ಈ ಹಿಂದೆ ಸರ್ಕಾರದಿಂದ ನಿಯೋಜನೆ ಮೇರೆಗೆ ವಿಶ್ವವಿದ್ಯಾಲಯದಲ್ಲಿ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿದ್ದ ಹಾಗೂ ಆ ಸಂದರ್ಭದಲ್ಲಿ ನ್ಯಾಕ್‌ಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಅನುಭವವಿರುವ ಶ್ರೀ ಶಿವಕುಮಾರ್ ಹಂಪಾಳೆ, ನಿವೃತ್ತ ಕಾರ್ಯಪಾಲಕ ಅಭಿಯಂತರ ಇವರನ್ನು ದಿನಾಂಕ:19-07-2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯದನುಸಾರ ನ್ಯಾಕ್ ಕಾರ್ಯ ಪೂರ್ಣಗೊಳ್ಳುವವರೆಗೆ ಅಥವಾ ಒಂದು ವರ್ಷದ ಅವಧಿಗೆ NAAC and Infrastructure Consultant ಆಗಿ ನೇಮಕ ಮಾಡಿದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಅವರನ್ನು ನಿವೃತ್ತ ಇಂಜಿನಿಯರ್ ಆಗಿ ತೆಗೆದುಕೊಂಡಿಲ್ಲ. ಅವರು ಈ ಹಿಂದೆ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಿದ್ದು, ಅವರ ಅವಧಿಯ ಕಾಮಗಾರಿಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದವು ಎಂದು ಬಹಳ ಜನರು ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದಾಗಿ, ನ್ಯಾಕ್ ಪೀರ್ ಸಮಿತಿಯ ಭೇಟಿ ಹಿನ್ನೆಲೆಯಲ್ಲಿ ಗುಣಮಟ್ಟದ ಕೆಲಸ ಆಗಬೇಕೆನ್ನುವ ಸದುದ್ದೇಶದಿಂದ ಅವರನ್ನು ತಾತ್ಕಾಲಿಕವಾಗಿ NAAC and Infrastructure Consultant ಆಗಿ ನೇಮಕ ಮಾಡಿದೆ. ಅವರ ಯೋಜನೆಗಳಿಂದ ಗುಣಮಟ್ಟದ ಕಾಮಗಾರಿಗಳು ಆಗುವ ಜೊತೆಗೆ ಬಹಳಷ್ಟು ಹಣ ಕೂಡ ಉಳಿತಾಯವಾಗುತ್ತದೆ. ಸದ್ಯಕ್ಕೆ ಅವರ ಅಗತ್ಯ ತುಂಬಾ ಇದೆ, ಆದುದರಿಂದ ಅವರ ಸೇವೆ ಬಳಸಿಕೊಳ್ಳಲಾಗಿದೆ ಎಂದರು.

**2025-ಸಿಂ-2.25(2ಡಿ):** ಮುಂದಿನ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಕೆಮಿಸ್ಟ್ರಿ, ಎಂ.ಬಿ.ಎ., ಫುಡ್ ಅಂಡ್ ಟೆಕ್ನಾಲಜಿ ಕೋರ್ಸ್‌ಗಳಿಗೆ ಹೆಚ್ಚಿನ ಸೀಟುಗಳನ್ನು ಅಲಾಟ್ ಮಾಡುವ ಬಗ್ಗೆ.

ಕುಲಸಚಿವರು ಮಾತನಾಡಿ, ಸ್ನಾತಕೋತ್ತರ ವಿಭಾಗಗಳಿಗೆ ತರಗತಿ ಕೊಠಡಿಗಳು, ಪೀಠೋಪಕರಣ ಪ್ರಯೋಗಾಲಯ ಮುಂತಾದ ಮೂಲಭೂತ ಸೌಲಭ್ಯಗಳನ್ನು ಆಧರಿಸಿ ಪ್ರವೇಶ ಮಿತಿಯನ್ನು ನಿಗದಿಪಡಿಸಲಾಗಿರುತ್ತದೆ. ಆದಾಗ್ಯೂ, ಮುಂದಿನ ಪ್ರವೇಶದ ಸಮಯದಲ್ಲಿ ಈ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು. ಪ್ರೊ.ಎಸ್.ವಿ.ಕೃಷ್ಣಮೂರ್ತಿರವರು ಮಾತನಾಡಿ, ಆಹಾರ ತಂತ್ರಜ್ಞಾನ ವಿಭಾಗವು ಇತ್ತೀಚೆಗೆ ಆರಂಭವಾಗಿದೆ. ಪ್ರಸ್ತುತ, ಸದರಿ ಕೋರ್ಸ್‌ಗೆ ಹೆಚ್ಚಿನ ಬೇಡಿಕೆ ಇದೆ. ಆದರೆ, ವಿಭಾಗಕ್ಕೆ ಇನ್ನೂ ಸೌಲಭ್ಯಗಳ ಕೊರತೆ ಇದೆ. ಪ್ರಯೋಗಾಲಯ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ ನಂತರ ಪ್ರವೇಶ ಮಿತಿ ಹೆಚ್ಚಳ ಮಾಡಬಹುದು ಎಂದರು. ವಿಶೇಷ ಆಹ್ವಾನಿತರಾಗಿದ್ದ, ಹಣಕಾಸು ಅಧಿಕಾರಿಗಳು ಮಾತನಾಡಿ, ಪ್ರಸ್ತುತ ಎಂ.ಬಿ.ಎ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ವಿಭಾಗಕ್ಕೆ 120 ವಿದ್ಯಾರ್ಥಿಗಳನ್ನು ಪಿ.ಜಿ.-ಸಿ.ಇ.ಟಿ. ಮೂಲಕ ಹಾಗೂ ಎಂ.ಬಿ.ಎ.-ಹೆಚ್.ಆರ್.ಎಂ. ವಿಭಾಗಕ್ಕೆ ವಿಶ್ವವಿದ್ಯಾಲಯದಿಂದ 40 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದೆ. ತರಗತಿಗಳಿಗೆ ಬೋಧನಾ ಕೊಠಡಿಗಳ ಕೊರತೆ ಇದೆ. ಬೆಳಿಗ್ಗೆ 9.00 ಗಂಟೆಯಿಂದಲೇ ಆರಂಭಿಸಿ shiftwise ತರಗತಿಗಳನ್ನು ನಡೆಸಲಾಗುತ್ತಿದೆ ಎಂದರು.

2025–ಸಿಂ–2.25(3): ಶ್ರೀಮತಿ ಸಾಕಮ್ಮ

2025–ಸಿಂ–2.25(3ಎ): 28–02–2024 ರ ಸಿಂಡಿಕೇಟ್ ನಿರ್ಣಯದಲ್ಲಿ ಉಳಿದ ವಿಲೀನೀಕರಣ ನೌಕರರಿಗೆ ಸೇವಾ ಸೌಲಭ್ಯವನ್ನು ವಿಸ್ತರಿಸಲು ನಿರ್ಣಯವಾಗಿದ್ದು, ಅದನ್ನು ಈವರೆಗೂ ಅನುಷ್ಠಾನಗೊಳಿಸದೇ ಇರುವ ಬಗ್ಗೆ

ಈ ವಿಷಯದ ಕುರಿತು ವಿಷಯ ಸಂಖ್ಯೆ:2025–ಸಿಂ–2.16(ಜೆ)ದಲ್ಲಿ ವಿವರವಾಗಿ ಚರ್ಚಿಸಿ ನಿರ್ಣಯಿಸಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಾಯಿತು.

2025–ಸಿಂ–2.25(3ಬಿ): ಖಾಲಿ ಇರುವ ಉಪಕುಲಸಚಿವರ ಹುದ್ದೆಗೆ ಬಡ್ತಿ ಪ್ರಕ್ರಿಯೆ ಪ್ರಾರಂಭಿಸುವ ಬಗ್ಗೆ.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಪೂರ್ಣ ಪ್ರಮಾಣದ ಉಪಕುಲಸಚಿವ ಹುದ್ದೆಗೆ ಬಡ್ತಿ ನೀಡುವ ಸಂಬಂಧ ಸಹಾಯಕ ಕುಲಸಚಿವರಾಗಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಅಧಿಕಾರಿಗಳು ಅರ್ಜಿ ಹಾಗೂ ಸ್ವವಿವರವನ್ನು ಸಲ್ಲಿಸುವಂತೆ ತಿಳಿಸಿ ದಿನಾಂಕ:04–07–2024 ರಂದು ಅಧಿಕೃತ ಜ್ಞಾಪನ ಹೊರಡಿಸಲಾಗಿತ್ತು. ಪ್ರಸ್ತುತದ ದಿನಾಂಕದವರೆಗೆ ಅರ್ಹತೆ ಹೊಂದಿರುವ ಉಳಿದ ಸಹಾಯಕ ಕುಲಸಚಿವರು ಕೂಡ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಶೀಘ್ರದಲ್ಲಿಯೇ ನೇಮಕಾತಿ ಮಂಡಳಿ ರಚಿಸಿ ಅರ್ಹರಿಗೆ ಸಂದರ್ಶನ ನಡೆಸಿ ಬಡ್ತಿ ನೀಡಲಾಗುವುದು ಎಂದರು.

2025–ಸಿಂ–2.25(3ಸಿ): ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಸಹಾಯಕ ಕುಲಸಚಿವರಾದ ಶ್ರೀ ಬಸವಣ್ಣ ಎಸ್. ಇವರ ವೇತನ ಪರಿಷ್ಕರಣೆ ಬಗ್ಗೆ, ಇವರ ವೇತನ ಪಾವತಿ ಪುಸ್ತಕ ಹಾಗೂ ಸೇವಾ ಪುಸ್ತಕ ಇವುಗಳೊಂದಿಗೆ ವರದಿಯನ್ನು ಸಭೆಗೆ ಮಂಡಿಸಿ, ನಿರ್ಣಯಗಳನ್ನು ದಾಖಲಿಸುವುದು.

ಶ್ರೀ ಬಸವಣ್ಣ ಎಸ್. ಇವರ ವೇತನ ಶ್ರೇಣಿ ಪರಿಷ್ಕರಣೆಯ ಕುರಿತು ದಿನಾಂಕ:19–11–2024ರ ಸಿಂಡಿಕೇಟ್ ವಿಷಯ ಸಂಖ್ಯೆ:2024–ಸಿಂ–5.26 (3–ಬಿ) ವಿಷಯದ ಚರ್ಚೆಯಲ್ಲಿ ಸದರಿಯವರ ವೇತನ ಪರಿಷ್ಕರಣೆ ಸಂಬಂಧ ಈಗಾಗಲೇ ಸಭೆಗೆ ಮಾಹಿತಿ ಒದಗಿಸಲಾಗಿದ್ದು, ಸದರಿಯವರ ವೇತನ ಪರಿಷ್ಕರಣೆ ಸಂಬಂಧ ಈಗಾಗಲೇ ಹಲವಾರು ಬಾರಿ ಕಾನೂನು ಸಲಹೆ ಪಡೆದು, ಸದರಿಯವರಿಗೆ ವೇತನ ಪರಿಷ್ಕರಣೆಗೆ ಅವಕಾಶವಿರುವುದಿಲ್ಲವೆಂದು ಹಲವಾರು ಬಾರಿ ಹಿಂಬರಹ ನೀಡಲಾಗಿರುತ್ತದೆ. ಅಲ್ಲದೇ ಸದರಿಯವರು ನೇಮಕಾತಿ ಸಂದರ್ಭದಲ್ಲಿ ಹಂಗಾಮಿಯಾಗಿ ಸಲ್ಲಿಸಿದ ಸೇವೆಗೆ ವೇತನ ಪರಿಷ್ಕರಣೆ ಮಾಡಲು ಅವಕಾಶವಿರುವುದಿಲ್ಲವೆಂದು ಮೈಸೂರು ವಿಶ್ವವಿದ್ಯಾಲಯವು ಸಹ ತಿಳಿಸಿರುತ್ತದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ನೀಡಲಾಯಿತು ಮತ್ತು ಶ್ರೀ ಬಸವಣ್ಣ ಎಸ್. ಇವರ ವೇತನ ಪಾವತಿ ದಾಖಲೆ ಮತ್ತು ಸೇವಾ ಪುಸ್ತಕದ ಪ್ರತಿಯನ್ನು ಸದಸ್ಯರ ಪರಿಶೀಲನೆಗೆ ಸಭೆಯಲ್ಲಿ ಒದಗಿಸಲಾಯಿತು.

2025–ಸಿಂ–2.25(3ಡಿ): 2023–24 ಹಾಗೂ 2024–25ರ ಘಟಿಕೋತ್ಸವಕ್ಕೆ ಆದ ಆದಾಯ ಮತ್ತು ವೆಚ್ಚದ ಬಗ್ಗೆ ಮಾಹಿತಿ ನೀಡುವುದು ಹಾಗೂ ನಡಾವಳಿಯಲ್ಲಿ ದಾಖಲಿಸುವುದು.

ಕುಲಸಚಿವ (ಮೌಲ್ಯಮಾಪನ)ರವರು 2023–24ರ ಹಾಗೂ 2024–25ರ ಘಟಿಕೋತ್ಸವಕ್ಕೆ ಆದ ವೆಚ್ಚಗಳ ಮಾಹಿತಿಯನ್ನು ನೀಡುತ್ತಾ, ಜನವರಿ–2025ರ ಮಾಹೆಯಲ್ಲಿ ನಡೆದ 34ನೇ ಘಟಿಕೋತ್ಸವದ ನಿರ್ವಹಣೆಯನ್ನು ಕರ್ನಾಟಕ ಸರ್ಕಾರದ ಈವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ ನೀಡಿದ್ದು, ಎ.ಸಿ. ಬಿಲ್ಲಿನ ಮೂಲಕ ಮುಂಗಡ ಪಡೆದು ಸದರಿ ಸಂಸ್ಥೆಗೆ ನೇರವಾಗಿ ಪಾವತಿಸಿದೆ ಎಂದರು.



8/4/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಮುಂದಿನ ಸಭೆಗೆ ಎರಡೂ ಘಟಿಕೋತ್ಸವಗಳ ವೆಚ್ಚದ ವಿವರಗಳನ್ನು ಒದಗಿಸುವಂತೆ ಕೇಳಿದರು.

2025–ಸಿಂ–2.25(4): **ಡಾ. ಮಧು ಜಿ.**

2025–ಸಿಂ–2.25(4ಎ): ವಿಶ್ವವಿದ್ಯಾಲಯದ ಪ್ರಾಧಿಕಾರಗಳಿಗೆ ಜೇಷ್ಠತೆಯ ಆಧಾರದ ಮೇಲೆ ಬಿ.ಇಡಿ ಕಾಲೇಜುಗಳ ಪ್ರಾಂಶುಪಾಲರಿಗೆ ಮೀಸಲಾತಿ ಒದಗಿಸುವ ಕುರಿತಂತೆ ಮಾಹಿತಿ, ಚರ್ಚೆ ಮತ್ತು ನಿರ್ಣಯ.

ಕುಲಸಚಿವರು ಮಾಹಿತಿ ನೀಡುತ್ತಾ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 28(ಎಫ್) ಪ್ರಕಾರ ಒಂದು ವರ್ಷದ ಅವಧಿಗೆ ಸಿಂಡಿಕೇಟ್ ಸದಸ್ಯರನ್ನಾಗಿ ಹಾಗೂ ಪ್ರಕರಣ 30(vi) ರನ್ವಯ ಎರಡು ವರ್ಷದ ಅವಧಿಗೆ ವಿದ್ಯಾವಿಷಯಕ ಪರಿಷತ್‌ಗೆ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳನ್ನು ಜೇಷ್ಠತೆಯ ಆಧಾರದ ಮೇಲೆ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್‌ಗೆ ಮಾನ್ಯ ಕುಲಪತಿಗಳು ನಾಮನಿರ್ದೇಶನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇದರಲ್ಲಿ ಬಿ.ಇಡಿ. ಕಾಲೇಜುಗಳನ್ನು ಪರಿಗಣಿಸಬೇಕೆಂದು ಇರುವುದಿಲ್ಲ. ಸದಸ್ಯರ ಮನವಿಯನ್ನು ಪರಿಗಣಿಸುವುದಾದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ಕ್ಕೆ ಈ ಬಗ್ಗೆ ತಿದ್ದುಪಡಿ ಆಗಬೇಕಾಗುತ್ತದೆ ಎಂದರು.

2025–ಸಿಂ–2.25(4ಬಿ): ಬಿ.ಇಡಿ ಕಾಲೇಜುಗಳಿಗೆ ಸಂಬಂಧಿಸಿದ ಸಮಿತಿಗಳಾಗಿರುವ BOAE, BOE ಹಾಗೂ QAC ಸಮಿತಿಗಳಿಗೆ ಜೇಷ್ಠತೆಯ ಹಾಗೂ ನಿಯಾಮವಳಿಗಳ ಆಧಾರದ ಮೇಲೆ ಸದಸ್ಯರ ನೇಮಕಾತಿಯಲ್ಲಿನ ತಾರತಮ್ಯದ ಬಗ್ಗೆ ಚರ್ಚೆ ಹಾಗೂ ನಿರ್ಣಯ.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಬಿ.ಇಡಿ ಕಾಲೇಜುಗಳಿಗೆ ಸಂಬಂಧಿಸಿದ ಸಮಿತಿಗಳಾಗಿರುವ BOAE, BOE ಹಾಗೂ QAC ಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000 ಪ್ರಕರಣ (36)ರಂತೆ ನೇಮಕಾತಿ ಮಂಡಲಿಯನ್ನು ರಚಿಸಿ ಸಮಿತಿ ಶಿಫಾರಸ್ಸಿನಂತೆ ನೇಮಕಗಳನ್ನು ಜೇಷ್ಟತೆ ಆಧಾರದ ಮೇಲೆ ಮಾಡಲಾಗುತ್ತಿದೆ ಎಂದರು.

2025–ಸಿಂ–2.25(4ಸಿ): ವಿಶ್ವವಿದ್ಯಾಲಯವು ಕಳೆದ ಸುಮಾರು ವರ್ಷಗಳಿಂದ ಆರ್ಥಿಕ ಕೊರತೆಯ ಬಜೆಟ್‌ನ್ನು (ಆಯ–ವ್ಯಯ) ಮಂಡಿಸುತ್ತಿದ್ದು, ಆರ್ಥಿಕ ಸುಧಾರಣೆಗೆ ವಿಶ್ವವಿದ್ಯಾಲಯವು ಈವರೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ, ಚರ್ಚೆ ಹಾಗೂ ನಿರ್ಣಯ.

ಇದರ ಕುರಿತಾಗಿ ಹಣಕಾಸು ಅಧಿಕಾರಿಗಳು ನೀಡಿರುವ ಮಾಹಿತಿಗಳನ್ನು ಸದಸ್ಯರಿಗೆ ಒದಗಿಸಲಾಯಿತು. ಡಾ. ಜಿ. ಮಧು ರವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಪ್ರಮುಖ ಆರ್ಥಿಕ ಮೂಲವಾಗಿದ್ದ ದೂರ ಶಿಕ್ಷಣ ನಿರ್ದೇಶನಾಲಯವನ್ನು ಪುನ:ಶ್ಚೇತನಗೊಳಿಸಲು ಸರ್ಕಾರಕ್ಕೆ ಒಂದು ನಿಯೋಗ ತೆರಳಿ ವಾಸ್ತವತೆಯನ್ನು ಮನವರಿಕೆ ಮಾಡಿಕೊಡಬಹುದು. ಈ ಬಗ್ಗೆ ಸರ್ಕಾರವು ಸಕಾರಾತ್ಮಕ ನಿಲುವು ತಳೆದಲ್ಲಿ ವಿಶ್ವವಿದ್ಯಾಲಯದ ಆಂತರಿಕ ಆದಾಯ ವೃದ್ಧಿಯಾಗುವುದರ ಮೂಲಕ ಬಹಳಷ್ಟು ಸಮಸ್ಯೆಗಳು ಬಗೆಹರಿಯುತ್ತವೆ ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ದೂರಶಿಕ್ಷಣ ಕೋರ್ಸ್‌ಗಳನ್ನು ಪುನರ್ ಆರಂಭಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ಕ್ರಮ ಕೈಗೊಳ್ಳಬೇಕೆಂದರು.

2025–ಸಿಂ–2.25(4ಡಿ): 2023–24 ಹಾಗೂ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಬಿ.ಇಡಿ. ಕಾಲೇಜುಗಳ ಮೇಲೆ ವಿಶ್ವವಿದ್ಯಾಲಯಕ್ಕೆ ಬಂದಿರುವ ದೂರುಗಳ ವಿವರಗಳ ಬಗ್ಗೆ ಮಾಹಿತಿ, ಚರ್ಚೆ ಮತ್ತು ನಿರ್ಣಯ.

8/4/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

8/4

ಡಾ. ಜಿ. ಮಧುರವರು ಮಾತನಾಡಿ ಬಿ.ಇಡಿ. ಕಾಲೇಜುಗಳಿಗೆ ವಿಶ್ವವಿದ್ಯಾಲಯದ Quality Assesment Committee ಭೇಟಿ ನೀಡಿ ಪರಿಶೀಲಿಸಿ ವರದಿ ನೀಡುತ್ತದೆ. ಕಾಲೇಜುಗಳ ಬಗ್ಗೆ ವಿಶ್ವವಿದ್ಯಾಲಯಕ್ಕೆ ಯಾರಾದರೂ ದೂರು ಸಲ್ಲಿಸಿದರೆ, ಮತ್ತೊಮ್ಮೆ ಸಮಿತಿ ಭೇಟಿ ನೀಡುತ್ತದೆ. ಇದರಿಂದ ವಿಶ್ವವಿದ್ಯಾಲಯಕ್ಕೆ ಅನಾವಶ್ಯಕವಾಗಿ ಆರ್ಥಿಕ ನಷ್ಟ ಉಂಟಾಗುತ್ತದೆ. ಆದುದರಿಂದ, ವಿಶ್ವವಿದ್ಯಾಲಯವು ಬಂದ ದೂರುಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಮಾತ್ರ ದೂರು ಬಂದ ಕಾಲೇಜಿಗೆ ಮಾತ್ರ ಸಮಿತಿಯನ್ನು ಕಳುಹಿಸಬಹುದು ಎಂದರು.

ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ, ಇನ್ನು ಮುಂದೆ ವಿಶ್ವವಿದ್ಯಾಲಯಕ್ಕೆ ಸ್ವೀಕೃತವಾದ ದೂರುಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಅಗತ್ಯವಿದ್ದಲ್ಲಿ ದೂರು ಬಂದ ಕಾಲೇಜಿಗೆ ಸಮಿತಿಯನ್ನು ಕಳುಹಿಸಲು ಕ್ರಮವಹಿಸುವುದಾಗಿ ತಿಳಿಸಿದರು.

**2025–ಸಿಂ–2.25(5):** <u>ಡಾ. ಕೆ.ಎಲ್.ಅರವಿಂದ</u>

ಅನುದಾನರಹಿತ ಕಾಲೇಜುಗಳ ಪರೀಕ್ಷಾ ಮುಖ್ಯ ಮೇಲ್ವಿಚಾರಕರ ಸಂಭಾವನೆಯನ್ನು ಹಿಂದಿನಂತೆ ಪ್ರತಿ ಅಧಿವೇಶನಕ್ಕೆ ರೂ.250/– ರಂತೆ ನೀಡಲು ಕೋರಿಕೆ. ಪ್ರಸ್ತುತ ಎಲ್ಲಾ ಅಧಿವೇಶನಕ್ಕೆ ಕ್ರೋಢಿಕೃತ ರೂ.4000/– ನೀಡಲಾಗುತ್ತಿದೆ.

ಶಿವಮೊಗ್ಗದ ಎಸ್.ಆರ್.ನಾಗಪ್ಪಶೆಟ್ಟಿ ಅನ್ವಯಿಕ ಕಾಲೇಜಿನ ಪ್ರಾಂಶುಪಾಲರಾದ ಡಾ.ಕೆ.ಎಲ್. ಅರವಿಂದ ರವರು ಮಾತನಾಡಿ, ಈ ಹಿಂದೆ ಅನುದಾನರಹಿತ ಕಾಲೇಜುಗಳ ಪರೀಕ್ಷಾ ಮುಖ್ಯ ಅಧೀಕ್ಷಕರಿಗೆ ಪ್ರತಿ ಸೆಷನ್‌ಗೆ ಸಂಭಾವನೆ ನೀಡುತ್ತಿದ್ದರು. ಆದರೆ, ಈಗ ಸರ್ಕಾರಿ ಮತ್ತು ಅನುದಾನಿತ ಕಾಲೇಜಿನವರಿಗೆ ಪ್ರತಿ ಪರೀಕ್ಷೆಗೆ ರೂ.4,000/– ಸಂಭಾವನೆ ನಿಗದಿಪಡಿಸಿದ್ದು, ಅದನ್ನು ಅನುದಾನ ರಹಿತ ಕಾಲೇಜಿನವರಿಗೆ ಕೂಡ ಅನ್ವಯವಾಗುವಂತೆ ನಿಗದಿಪಡಿಸಿದ್ದಾರೆ. ಉದಾಹರಣೆಗೆ, ಸಾಫ್ಟ್‌ವೇರ್‌ನಲ್ಲಿ ಪ್ರತಿ ಸೆಷನ್‌ಗೆ ರೂ.250/–ಗಳೆಂದು ಹಾಗೂ ಎಲ್ಲಾ ಪರೀಕ್ಷೆಗಳು ಸೇರಿ ರೂ.12,500/– ಬಿಲ್ ಜನರೇಟ್ ಆಗುತ್ತದೆ. ಆದರೆ, ಇದನ್ನು ಪಾವತಿಸುವುದರಲ್ಲಿ ನಿರಾಕರಿಸಿ, ಕೇವಲ ರೂ.4000/–ಗಳನ್ನು ಮಾತ್ರ ಪಾವತಿಸಲಾಗುತ್ತಿದೆ. ಮುಂದುವರೆದು ಮಾತನಾಡಿದ ಅವರು ಪ್ರಾಯೋಗಿಕ ಪರೀಕ್ಷೆಗಳಿಗೆ ಪ್ರತಿ ಸೆಷನ್‌ಗೆ ರೂ.150/–ಗಳು ಬರಬೇಕು. ಆದರೆ, ಒಂದು ದಿನಕ್ಕೆ ರ.150/–ಗಳನ್ನು ಪಾವತಿಸಲಾಗುತ್ತಿದೆ. ಇದರಿಂದ, ಅನುದಾನ ರಹಿತ ಕಾಲೇಜಿನವರಿಗೆ ಅನ್ಯಾಯವಾಗುತ್ತಿದೆ. ಆದುದರಿಂದ, ಈ ಬಗ್ಗೆ ಪರಿಶೀಲಿಸಿ, ಅನುದಾನರಹಿತ ಕಾಲೇಜಿನವರಿಗೆ ಪ್ರತಿ ಸೆಷನ್ ಲೆಕ್ಕದಲ್ಲಿ ಸಂಭಾವನೆ ಪಾವತಿಸುವಂತೆ ಕೋರಿದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಅನುದಾನರಹಿತ ಕಾಲೇಜುಗಳ ಪರೀಕ್ಷಾ ಮುಖ್ಯ ಅಧೀಕ್ಷಕರಿಗೆ ಪ್ರತಿ ಸೆಷನ್‌ಗೆ ಸಂಭಾವನೆ ಪಾವತಿಸುವ ಬಗ್ಗೆ ಸಿಂಡಿಕೇಟ್ ನಿರ್ಣಯ ಆಗಿಲ್ಲ ಎನ್ನುತ್ತಿದ್ದಾರೆ. ಮುಂದಿನ ಪರೀಕ್ಷೆಗಳಿಂದ ಅನ್ವಯವಾಗುವಂತೆ, ಅನುದಾನರಹಿತ ಕಾಲೇಜಿನ ಪರೀಕ್ಷಾ ಮುಖ್ಯ ಅಧೀಕ್ಷಕರಿಗೆ ಪ್ರತಿ ಸೆಷನ್‌ಗೆ ಹಾಗೂ ಪ್ರಾಯೋಗಿಕ ಪರೀಕ್ಷಾ ಸಂಭಾವನೆಯನ್ನು ಕೂಡ ಒಂದು ದಿನದ ಬದಲಾಗಿ ಒಂದು ಸೆಷನ್‌ಗೆ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

**2025–ಸಿಂ–2.25(6):** **ಶ್ರೀ ಕೆ.ಪಿ. ಶ್ರೀಪಾಲ್**

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ವಿಶ್ವವಿದ್ಯಾಲಯ ಒದಗಿಸಿರುವ ಮಾಹಿತಿಯನ್ನು ಪರಿಶೀಲಿಸಲು ಸಮಯಾವಕಾಶದ ಅಗತ್ಯವಿರುವುದರಿಂದ ಇದನ್ನು ಮುಂದಿನ ಸಭೆಯಲ್ಲಿ ಚರ್ಚೆಗೆ ಕೈಗೆತ್ತಿಕೊಳ್ಳಲಾಗುವುದು ಎಂದರು.

**2025–ಸಿಂ–2.26:** **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2025–ಸಿಂ–2.26(1):** **ವಿಶ್ವವಿದ್ಯಾಲಯದ 4 ವರ್ಷಗಳ ಅವಧಿಯ** Vision Document 2024-2028 **ಕುರಿತು.**

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಮಾನ್ಯ ಕುಲಪತಿಯವರು ಮಾತನಾಡಿ, ಕುವೆಂಪು ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಮತ್ತು ಸಂಶೋಧನೆ ಅಭಿವೃದ್ಧಿಯ ದೃಷ್ಟಿಯಿಂದ ಆಗಬೇಕಾಗಿರುವ ಕಾರ್ಯಚಟುವಟಿಕೆಗಳ ಬಗ್ಗೆ ರೂಪುರೇಷೆ ಸಿದ್ಧಪಡಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಎಲ್ಲಾ ಆಯಾಮಗಳಲ್ಲಿ ಸಮಗ್ರವಾಗಿ ಪರಿಶೀಲಿಸಿ Vision Document 2024-2028ನ್ನು ಸಿದ್ಧಪಡಿಸಿದೆ. ಇದನ್ನು ದಿನಾಂಕ:18–02–2025ರಂದು ಬಿಡುಗಡೆಗೊಳಿಸಲಾಗಿದ್ದು, ಪ್ರಸ್ತುತ ಎಲ್ಲಾ ಸಿಂಡಿಕೇಟ್ ಸದಸ್ಯರಿಗೆ ನೀಡಲಾಗಿದೆ. ಎಲ್ಲಾ ಸಿಂಡಿಕೇಟ್ ಸದಸ್ಯರು ಇದನ್ನು ಅಧ್ಯಯನ ಮಾಡುವಂತೆ ಕೋರಿದ ಕುಲಪತಿಯವರು, ಇದಕ್ಕಾಗಿಯೇ ಪ್ರತ್ಯೇಕವಾದ ಒಂದು ಸಭೆಯನ್ನು ಏರ್ಪಡಿಸಲಾಗುವುದು. ಸದರಿ ಸಭೆಯಲ್ಲಿ ತಮ್ಮ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ನೀಡುವಂತೆ ವಿನಂತಿಸಿದರು.

ಎಲ್ಲಾ ಸದಸ್ಯರು ಇದಕ್ಕೆ ತಮ್ಮ ಸಮ್ಮತಿ ಸೂಚಿಸಿದರು.

**2025–ಸಿಂ–2.26(2): ಶ್ರೀ. ಕೆ.ಪಿ. ಶ್ರೀಪಾಲ್ – ಹೊರಗುತ್ತಿಗೆ ನೌಕರರ ಬಾಕಿ ವೇತನ ಪಾವತಿ ಬಗ್ಗೆ**

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ನೌಕರರಿಗೆ ಕಳೆದ ಮೂರು ತಿಂಗಳುಗಳಿಂದ ವೇತನ ವಾಗದಿರುವುದರಿಂದ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ ಎಂದು ಧರಣಿ ಕುಳಿತಿದ್ದಾರೆ. ಜೀವನ ನಿರ್ವಹಣೆಗೆ ವೇತನವೇ ಆಧಾರವಾಗಿರುವುದರಿಂದ ಇದನ್ನು ಮಾನವೀಯ ನೆಲೆಯಲ್ಲಿ ಪರಿಶೀಲಿಸಿ ಆದಷ್ಟು ಬೇಗನೆ ವೇತನ ಪಾವತಿಸಿ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ನಿನ್ನೆ ರೂ.67.00 ಲಕ್ಷ (ರೂಪಾಯಿ ಅರವತ್ತೇಳು ಲಕ್ಷ ಮಾತ್ರ) ಗಳನ್ನು ಬ್ಯಾಂಕ್ ಖಾತೆಗೆ ವರ್ಗಾಯಿಸಿದೆ. ಹೆಚ್ಚು ಜನ ನೌಕರರು ಇರುವುದರಿಂದ ಆರ್ಥಿಕವಾಗಿ ಹೊರೆಯಾಗುತ್ತಿದೆ. ಹೊಸ ಟೆಂಡರ್‌ನಲ್ಲಿ ಸಂಖ್ಯೆಯನ್ನು ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಮುಂದಿನ ದಿನಗಳಲ್ಲಿ ಸಕಾಲದಲ್ಲಿ ವೇತನ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ವಿಶೇಷ ಆಹ್ವಾನಿತರಾಗಿದ್ದ ಹಣಕಾಸು ಅಧಿಕಾರಿಗಳು ಮಾತನಾಡಿ, ಈಗ ಒಂದು ತಿಂಗಳ ವೇತನ ಪಾವತಿಸಿದೆ. ಇನ್ನೂ 3 ತಿಂಗಳ ವೇತನ ಬಾಕಿ ಇದೆ. ಸುಮಾರು ರೂ. 10 ಕೋಟಿ (ರೂಪಾಯಿ ಹತ್ತು ಕೋಟಿ ಮಾತ್ರ) ಗಳ ಬಿಲ್ಲುಗಳು ಪಾವತಿಗೆ ಬಾಕಿ ಇವೆ. ವಿಶ್ವವಿದ್ಯಾಲಯವು ಆಂತರಿಕ ಸಂಪನ್ಮೂಲದಿಂದಲೇ ಹೊರಗುತ್ತಿಗೆ ನೌಕರರು ಮತ್ತು ಅತಿಥಿ ಉಪನ್ಯಾಸಕರ ವೇತನ ಪಾವತಿಸಬೇಕು. ಸರ್ಕಾರದಿಂದ ಸುಮಾರು ರೂ.10 ಕೋಟಿ (ರೂಪಾಯಿ ಹತ್ತು ಕೋಟಿ ಮಾತ್ರ) ಗಳಷ್ಟು ಅನುದಾನ ಬರುವುದು ಬಾಕಿ ಇದೆ. ಹಲವು ಬಾರಿ ಈ ಕುರಿತಾಗಿ ಪ್ರಸ್ತಾವನೆ ಸಲ್ಲಿಸಿದ್ದೇವೆ. ಪಿಂಚಣಿ ಅನುದಾನ ಕೂಡ ಪೂರ್ಣಪ್ರಮಾಣದಲ್ಲಿ ಬಿಡುಗಡೆಯಾಗದೇ ನಿವೃತ್ತ ನೌಕರರಿಗೆ ನಿವೃತ್ತಿ ಸೌಲಭ್ಯಗಳನ್ನು ಪಾವತಿಸುವುದು ಕೂಡ ಬಾಕಿ ಇದೆ. ಹೊರಗುತ್ತಿಗೆ ನೌಕರರ ಸಂಖ್ಯೆ ಮತ್ತು ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕಡಿತಗೊಳಿಸುವಂತೆ ಸರ್ಕಾರದಿಂದ ಪತ್ರ ಬಂದಿದೆ ಎಂದರು. ಶ್ರೀ ಅರವಿಂದರವರು ಮಾತನಾಡಿ, ಹೊರಗುತ್ತಿಗೆ ನೌಕರರಿಗೆ ಕಡಿಮೆ ವೇತನ ಪಾವತಿಸುತ್ತಿದ್ದು, ಬಹಳ ವರ್ಷಗಳಿಂದ ವೇತನ ಹೆಚ್ಚಿಸಿಲ್ಲ. ಅದನ್ನು ಪರಿಷ್ಕರಿಸಿ ಎಂದರು. ಕುಲಸಚಿವರು ಮಾತನಾಡಿ, ಹೊರಗುತ್ತಿಗೆ ನೌಕರರಿಗೆ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ ನಿಗದಿಪಡಿಸಿರುವ ವೇತನವನ್ನೇ ನೀಡಲಾಗುತ್ತಿದೆ. ಅಲ್ಲದೇ ಪ್ರತಿ ವರ್ಷ ಸರ್ಕಾರವು ಪರಿಷ್ಕರಿಸಿ ಹೆಚ್ಚಿಸುವ ವಿ.ಡಿ.ಎ. ದರಲ್ಲಿಯೇ ವಿಶ್ವವಿದ್ಯಾಲಯದಲ್ಲಿ ಕೂಡ ಹೆಚ್ಚಿಸಲಾಗುತ್ತಿದೆ ಎಂದರು. ಶ್ರೀ ಮುಸಾವೀರ್ ಬಾಷಾ, ಶ್ರೀ ಲಕ್ಷ್ಮಿಕಾಂತ ಚಿಮ್ಮನೂರು, ಶ್ರೀ ಶಶಿಧರ, ಬಿ.ಎನ್. ಶ್ರೀ ಶಾಂತಕುಮಾರ್ ರವರು ಮಾತನಾಡಿ ಸಿಂಡಿಕೇಟ್ ಸದಸ್ಯರ ನಿಯೋಗವನ್ನು ಕರೆದೊಯ್ದು ಬಾಕಿ ಬರಬೇಕಾಗಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಹಾಗೂ ಹೆಚ್ಚಿನ ಅನುದಾನ ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದು. ಇದರಿಂದ ಬಹಳಷ್ಟು ಅನುದಾನ ತರಬಹುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಶೀಘ್ರದಲ್ಲಿಯೇ ನಿಯೋಗ ತೆರಳಬಹುದು ಎಂದರು.

ಸುದೀರ್ಘ ಚರ್ಚೆಯ ನಂತರ, ಸರ್ಕಾರದಿಂದ ಬರಬೇಕಾಗಿರುವ ಬಾಕಿ ಅನುದಾನವನ್ನು ಬಿಡುಗಡೆ ಮಾಡಿಸಲು ಹಾಗೂ ಹೆಚ್ಚಿನ ಅನುದಾನ ಒದಗಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಿಂಡಿಕೇಟ್ ಸದಸ್ಯರ ನಿಯೋಗವು ಸರ್ಕಾರಕ್ಕೆ ಸಲ್ಲಿಸಿ ಅನುದಾನ ಬಿಡುಗಡೆಗೆ ಮನವಿ ಮಾಡಬೇಕೆಂದು ನಿರ್ಣಯಿಸಲಾಯಿತು.

8/4/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

2025–ಸಿಂ–2.26(3): ಡಾ. ಕೆ. ಎಲ್. ಅರವಿಂದ – ಎನ್.ಇ.ಪಿ. ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಏರ್ಪಡಿಸುವ ಬಗ್ಗೆ.

ಸದಸ್ಯರಾದ ಡಾ. ಕೆ. ಎಲ್. ಅರವಿಂದ ರವರು ಮಾತನಾಡಿ, ಎನ್.ಇ.ಪಿ. ಅಡಿಯಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಈಗಾಗಲೇ ಪದವಿ ಮುಗಿಸಿದ್ದಾರೆ. ಅವರಿಗೆ ಮುಂದಿನ ಉನ್ನತ ಶಿಕ್ಷಣ ಹಾಗೂ ಉದ್ಯೋಗ ಪಡೆಯುವ ಸಲುವಾಗಿ ಪದವಿ ಪ್ರಮಾಣಪತ್ರಗಳನ್ನು ಎಲ್ಲೆಡೆ ಕೇಳುತ್ತಿದ್ದಾರೆ. ಆದುದರಿಂದ ಎನ್.ಇ.ಪಿ. ಸ್ಕೀಂ ನಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಏರ್ಪಡಿಸಿ ಪದವಿ ಪ್ರಮಾಣಪತ್ರಗಳನ್ನು ನೀಡುವಂತೆ ಕೋರಿದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಕಳೆದ ಜನವರಿ ಮಾಹೆಯಲ್ಲಿ ವಿಶ್ವವಿದ್ಯಾಲಯದ 34ನೇ ಘಟಿಕೋತ್ಸವವನ್ನು ಏರ್ಪಡಿಸಲಾಗಿದೆ. 35ನೇ ಘಟಿಕೋತ್ಸವವನ್ನು ಏರ್ಪಡಿಸಲು ಸಿದ್ಧತೆಗಳನ್ನು ಆರಂಭಿಸಲಾಗುವುದು ಎಂದರು.

2025–ಸಿಂ–2.26(4): ಶ್ರೀ ಮುಸಾವೀರ್ ಬಾಷಾ

1) ಸದಸ್ಯರಾದ ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಸಿಂಡಿಕೇಟ್‌ನಲ್ಲಿ ಕೈಗೊಂಡ ನಿರ್ಣಯಗಳು ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ. ಆದುದರಿಂದ, ಸಿಂಡಿಕೇಟ್ ನಿರ್ಣಯಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲು ಕೋರಿದರು. ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಕುಲಸಚಿವರು ತಿಳಿಸಿದರು.

2) ಪಿಹೆಚ್.ಡಿ. ಪ್ರವೇಶ ಪರೀಕ್ಷೆಗಳನ್ನು ವಿಭಾಗವಾರು ಮಾಡುವುದರ ಬದಲು ಪರೀಕ್ಷಾ ವಿಭಾಗದಿಂದ ಏಕೀಕೃತವಾಗಿ (Centralized) ಏರ್ಪಡಿಸುವ ಬಗ್ಗೆ ಈ ಹಿಂದೆ ಚರ್ಚಿಸಲಾಗಿತ್ತು. ಅದು ಜಾರಿಯಾಗಿಲ್ಲ. ಅಲ್ಲದೇ ಇತಿಹಾಸ ವಿಭಾಗದ ಪಿಹೆಚ್.ಡಿ. ಪ್ರವೇಶ ಪರೀಕ್ಷೆಯನ್ನು ಮರು ಪರೀಕ್ಷೆ ನಡೆಸುವಂತೆ ದೂರು ಬಂದಿದ್ದು ಕ್ರಮ ಕೈಗೊಳ್ಳಬೇಕೆಂದರು.

ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ, 2017ರ ಪಿಹೆಚ್.ಡಿ. ರೆಗ್ಯುಲೇಷನ್‌ನಲ್ಲಿ ಪಿಹೆಚ್.ಡಿ. ಪ್ರವೇಶ ಪರೀಕ್ಷೆಗಳನ್ನು ಏಕೀಕೃತವಾಗಿ (Centralized) ನಡೆಸಲು ಹಾಗೂ ಮರು ಪರೀಕ್ಷೆ ನಡೆಸಲು ಅವಕಾಶವಿಲ್ಲ ಎಂದರು. ಪ್ರೊ.ಎಸ್.ವಿ.ಕೃಷ್ಣಮೂರ್ತಿಯವರು ಕೂಡ ಇದಕ್ಕೆ ಧ್ವನಿಗೂಡಿಸಿದರು.

3) ಡಾ.ಹೆಚ್.ಕೆ. ಹಸೀನಾರವರು ಸುಮಾರು 20 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಿಂದ ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರಿಗೆ ಮಾಸಿಕ ರೂ.5,000/– (ರೂಪಾಯಿ ಐದು ಸಾವಿರ ಮಾತ್ರ) ಗಳು ಗೌರವ ಸಂಭಾವನೆ ಸಿಗುತ್ತಿದೆ. ಇದರಿಂದ ಅವರ ಜೀವನ ನಿರ್ವಹಣೆ ತುಂಬಾ ಕಷ್ಟವಾಗುತ್ತಿದೆ. ಆದುದರಿಂದ, ಅವರಿಗೆ ಮ್ಯೂಸಿಯಂ ನೋಡಿಕೊಳ್ಳಲು ಅವಕಾಶ ಕೊಟ್ಟರೆ ಅನುಕೂಲವಾಗುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಡಾ.ಹೆಚ್.ಕೆ. ಹಸೀನಾ ಅವರಿಗೆ ವಿಶ್ವವಿದ್ಯಾಲಯದ ಮ್ಯೂಸಿಯಂ ಮತ್ತು ಕೆಳದಿ ಮ್ಯೂಸಿಯಂಗಳ ಜವಾಬ್ದಾರಿ ಹಾಗೂ ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ನೇಮಿಸುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

025–ಸಿಂ–2.26(5): ಶ್ರೀಮತಿ ಸಾಕಮ್ಮ : ಪಿಹೆಚ್.ಡಿ. ಸಂಶೋಧನಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವ ಬಗ್ಗೆ.

ಶ್ರೀಮತಿ ಸಾಕಮ್ಮರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ. ಸಂಶೋಧನೆ ಕೈಗೊಂಡಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕೆಲವು ವರ್ಷಗಳಿಂದ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಲ್ಯಾಪ್‌ಟಾಪ್‌ಗಳನ್ನು ನೀಡುತ್ತಿಲ್ಲ. ಇದರಿಂದಾಗಿ ಅವರ ಸಂಶೋಧನೆಗೆ ತೊಂದರೆಯಾಗುತ್ತಿದೆ ಮತ್ತು ಸಂಶೋಧನೆ ವಿಳಂಬವಾಗುತ್ತಿದೆ. ಈ ಬಗ್ಗೆ ಕ್ರಮ ಕೈಗೊಂಡು ಆದಷ್ಟು ಬೇಗನೆ ಲ್ಯಾಪ್‌ಟಾಪ್ ನೀಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ಪಿಹೆಚ್.ಡಿ. ಸಂಶೋಧನೆ ಕೈಗೊಂಡಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಹಿಂದೆ ಸರ್ಕಾರದಿಂದ ಎಸ್.ಸಿ.ಪಿ./ಟಿ.ಎಸ್.ಪಿ. ಅಡಿಯಲ್ಲಿ ಲ್ಯಾಪ್‌ಟಾಪ್ ನೀಡುವುದಕ್ಕಾಗಿಯೇ ಪ್ರತ್ಯೇಕ ಅನುದಾನ ಬಿಡುಗಡೆಯಾಗುತ್ತಿತ್ತು. ಈಗ್ಗೆ ಕೆಲ ವರ್ಷಗಳಿಂದ ಸರ್ಕಾರ ಲ್ಯಾಪ್‌ಟಾಪ್ ನೀಡಲು ಎಸ್.ಸಿ.ಪಿ./ಟಿ.ಎಸ್.ಪಿ. ಅಡಿಯಲ್ಲಿ ಅನುದಾನ ನೀಡುತ್ತಿಲ್ಲ. ಈ ವರ್ಷ ಅನುದಾನ ನೀಡುವುದಾಗಿ ವಿದ್ಯಾರ್ಥಿಗಳ ಮಾಹಿತಿ ಹಾಗೂ ಕ್ರಿಯಾ ಯೋಜನೆ ಕೇಳಿದ್ದರು. ಅದನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರದಿಂದ ಅನುದಾನ ಬಿಡುಗಡೆಯಾದಲ್ಲಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಲಾಗುವುದು ಎಂದರು.

**2025–ಸಿಂ–2.26(6): ದೂರಶಿಕ್ಷಣದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡುವ ಕುರಿತು.**

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡುತ್ತಾ, ಕೋವಿಡ್–19ರ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆ ಬರೆಯುವುದರಿಂದ ವಿನಾಯಿತಿ ನೀಡಿ, ಆಂತರಿಕ ಅಂಕಗಳ ಆಧಾರದಲ್ಲಿ ಫಲಿತಾಂಶ ನೀಡಲಾಗಿತ್ತು. ಪ್ರಸ್ತುತ ಕೋವಿಡ್–19ರ ಅವಧಿಯ ಅನುತ್ತೀರ್ಣ ವಿದ್ಯಾರ್ಥಿಗಳು ಮನವಿ ಸಲ್ಲಿಸಿ, ತಮ್ಮನ್ನು ಕೂಡ ಆಂತರಿಕ ಅಂಕಗಳ ಆಧಾರದಲ್ಲಿ ಉತ್ತೀರ್ಣರಾಗಿಸುವಂತೆ ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ ಎಂದರು.

**ಚರ್ಚೆಯ ನಂತರ** ಕೋವಿಡ್–19ರ ಅವಧಿ ಮತ್ತು ನಂತರದಲ್ಲಿ ಅನುತ್ತೀರ್ಣರಾಗಿರುವ ದೂರಶಿಕ್ಷಣ ಕೋರ್ಸ್‌ಗಳ ವಿದ್ಯಾರ್ಥಿಗಳು ಮತ್ತೆ Internal Assesment ನ್ನು ಬರೆದು ಸಲ್ಲಿಸಬೇಕು ಮತ್ತು ಲಿಖಿತ ಪರೀಕ್ಷೆಗಳನ್ನು ಕೂಡ ಬರೆಯಬೇಕೆಂದು ನಿರ್ಣಯಿಸಲಾಯಿತು.

**2025–ಸಿಂ–2.26(7): ಡಾ.ಜಿ. ಮಧು – ಪರೀಕ್ಷಾ ಜಾಗೃತದಳದ ಸದಸ್ಯರು ಉತ್ತರ ಪತ್ರಿಕೆಗಳ ಬಂಡಲ್ ತರುವ ಕುರಿತು.**

ಡಾ. ಜಿ. ಮಧುರವರು ಮಾತನಾಡಿ, ವಿಶ್ವವಿದ್ಯಾಲಯದ ಪರೀಕ್ಷಾ ಕೇಂದ್ರಗಳಿಗೆ ತೆರಳುವ ಜಾಗೃತದಳದ ಸದಸ್ಯರು ಉತ್ತರಪತ್ರಿಕೆಗಳ ಬಂಡಲ್‌ಗಳನ್ನು ಕೂಡ ತಂದು ಮೌಲ್ಯಮಾಪನ ಕೇಂದ್ರಗಳಿಗೆ ಸಲ್ಲಿಸಬೇಕು. ಇದು ಬಹಳ ಜವಾಬ್ದಾರಿಯುತವಾದ ಕೆಲಸವಾಗಿದ್ದು, ಆದುದರಿಂದ ಅವರಿಗೆ Answer Bundle Carrying Charges ಎಂದು ವಿಶೇಷ ಮೊಬಲಗು ಪಾವತಿಸುವಂತೆ ಕೋರಿದರು. ಶ್ರೀ ಎಂ. ಶಿವಕುಮಾರ್ ರವರು ಮಾತನಾಡಿ, ಜಾಗೃತದಳದ ಸದಸ್ಯರು ಪರೀಕ್ಷಾ ಕೇಂದ್ರಗಳಿಂದ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಸುರಕ್ಷಿತವಾಗಿ ತಂದು ಮೌಲ್ಯಮಾಪನ ಕೇಂದ್ರಗಳಿಗೆ ಸಲ್ಲಿಸುವುದು ಅಪಾಯಕಾರಿ ಕೆಲಸ ಕೂಡ ಆಗಿದೆ ಎಂದರು.

ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ, ಈ ಬಗ್ಗೆ ಸರ್ಕಾರದ ಆದೇಶಗಳನ್ನು ಪರಿಶೀಲಿಸಿ ಮತ್ತು ಬೇರೆ ವಿಶ್ವವಿದ್ಯಾಲಯಗಳಿಂದ ಮಾಹಿತಿ ಪಡೆದು ನಿರ್ಣಯಿಸಲಾಗುವುದು ಎಂದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಸಹಿ/–
ಕುಲಪತಿಗಳು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.